


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

SK NEWS ಕನ್ನಡ



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 06 | Issue : 305 | Wednesday 24-04-2024 | E-mail : maruti.b.hosamani76@gmail.com | Page: 4 | Price : Rs. 1/-


## ಸ್ಮಶಾನದಲ್ಲಿ ಶವ ಹೂಳಲು ಅಡ್ಡಿ, ಪಿಡಿಓ ದೂರು, ಅಡ್ಡಿ ಪಡಿಸಿದ ವ್ಯಕ್ತಿ ಈಗ ಪೊಲೀಸ್‌ರ ವಶ

**ಕೂಡ್ಲಿಗಿ :** 23 /04/2024 ರಂದು ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕು ಅಂಬಳಿ ಗ್ರಾಮದಲ್ಲಿ ಶ್ರೀ ಕಲ್ಲೇಶ್ವರ ರಥೋತ್ಸವವು ಬಹಳ ಅದ್ದೂರಿಯಾಗಿ ಇಂದು ಜರಗಿತು.

ಕಲ್ಲೇಶ್ವರ ದೇವಸ್ಥಾನವು ಭಾರತದ ಕರ್ನಾಟಕ ರಾಜ್ಯದ ವಿಜಯನಗರ ಜಿಲ್ಲೆಯ ಅಂಬಲಿ ಪಟ್ಟಣದಲ್ಲಿದೆ. ಸಭಾಮಂಟಪದಲ್ಲಿ ಇರಿಸಲಾಗಿರುವ ಹಳೆಯ ಕನ್ನಡ ಶಾಸನದ ಪ್ರಕಾರ, ಪಶ್ಚಿಮ ಚಾಲುಕ್ಯ ಸಾಮ್ರಾಜ್ಯದ ರಾಜ ವಿಕ್ರಮಾದಿತ್ಯ ೧೫ ರ ಆಳ್ವಿಕೆಯಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ಈದೇವಾಲಯವನ್ನುಭಾರತೀಯಪುರಾತತ್ವಸರ್ವೇಕ್ಷಣೆಯರಾಷ್ಟ್ರೀಯ ಪ್ರಾಮುಖ್ಯತೆಯ ಸ್ಮಾರಕವಾಗಿ ರಕ್ಷಿಸಲಾಗಿದೆ.

ಶ್ರೀ ಕಲ್ಲೇಶ್ವರ ರಥೋತ್ಸವ ಎಳೆಯುವುದಕ್ಕಿಂತ ಮೂರು ದಿವಸ ಮುಂಚಿತವಾಗಿ ಪ್ರತಿದಿನ ಹುಚ್ಚಾಯನನ್ನು ಎಳೆಯಲಾಗುತ್ತದೆ. ಮೂರನೇ ದಿನ ಸಾಯಂಕಾಲ ಶ್ರೀ ಕಲ್ಲೇಶ್ವರನ ರಥೋತ್ಸವವನ್ನು ಎಳೆಯಲಾಗುತ್ತದೆ. ರಥೋತ್ಸವ ಹೇಳುವುದಕ್ಕಿಂತ ಮುಂಚಿತವಾಗಿ ಊರಿನ ಬಣಕಾರ ಬಸವರಾಜರವರ ಮನೆಯಿಂದ ರಥೋತ್ಸವಕ್ಕೆ ಎಡೆಯನ್ನು ತರಲಾಗುತ್ತದೆ. ಎಡೆಯನ್ನು ನಾಲ್ಕು ಗಾಲಿಗಳಿಗೆ ಹಾಕಿ, ಶ್ರೀ ಕಲ್ಲೇಶ್ವರನಿಗೆ ನೈವೇದ್ಯ ಮಾಡಿದ ನಂತರ, ಎಲ್ಲಾ ಭಕ್ತರು ರಥೋತ್ಸವದ ಗಾಲಿಗೆ ತೆಂಗಿನಕಾಯಿಯನ್ನು ಹೊಡೆಯುವ ಮೂಲಕ ತಮ್ಮ ಭಕ್ತಿಯನ್ನು ಸಮಪಿ9ಸುತ್ತಾರೆ. ದಲಿತಮಹಿಳೆಯು ಕಳಸವನ್ನು ಕಲ್ಲೇಶ್ವರನಿಗೆ ಮತ್ತು ರಥೋತ್ಸವದಮುಂಭಾಗಕ್ಕೆಬೆಳಗುತ್ತಾರೆ,ನಂತರಕಲ್ಲೇಶ್ವರರಥೋತ್ಸವದ



ಪಟಾಕ್ಷೀಯ ಸವಾಲ್ ಕೂಗುತ್ತಾರೆ.ಪಟಾಕ್ಷೀಯ ಸವಾಲು ಮುಗಿದ ಕೆಲವೇ ಕ್ಷಣಗಳಲ್ಲಿ, ಭಕ್ತರು ಕಲ್ಲೇಶ್ವರ ಘೋಷಣೆಯನ್ನು ಭಕ್ತಿಯಿಂದ ಕೂಗುತ್ತಾ ಮುನ್ನಡೆಸುತ್ತಾರೆ.ರಥೋತ್ಸವವನ್ನು ಶ್ರೀ ಕಲ್ಲೇಶ್ವರ ದೇವಸ್ಥಾನದ ಪೂಜಾರಿಗಳು ಮತ್ತು ಸ್ವಾಮಿಗಳು ಏರುತ್ತಾರೆ.

ಈ ಸಂದರ್ಭದಲ್ಲಿ ಊರಿನ ಮುಖಂಡರಾದ ಎ ಷಡಕ್ಷರಿ, ಎಂ ದೇವೇಂದ್ರಗೌಡ, ಎಂ ಚನ್ನಬಸಪ್ಪ, ಟಿ ಪ್ರಕಾಶ್ ಗೌಡ, ಎಂ ಮಂಜುನಾಥ, ಪೂಜಾರ ನಾಗೇಶ್, ಇತರೆ ಊರಿನ ಮುಖಂಡರು ಉಪಸ್ಥಿತರಿದ್ದು, ರಥೋತ್ಸವದ ಕಾರ್ಯವನ್ನು ಯಶಸ್ವಿಗೊಳಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್.ಪ್ರದೀಪ್.ಕುಮಾರ್.ಸಿ. ಕೊಟ್ಟೂರು.**

## ರಾಜ್ಯ ಸಮಿತಿ ಸದಸ್ಯರಾಗಿ ಗುಳಿಗಿ ವೀರೇಂದ್ರ ಕುಮಾರ ನೇಮಕ

**ಕೂಡ್ಲಿಗಿ :** ಪಟ್ಟಣದ ಗುಳಿಗಿ ವೀರೇಂದ್ರ ಕುಮಾರ್ ಅವರನ್ನು ಭಾರತೀಯ ಜನತಾ ಪಾರ್ಟಿಯ ವೃತ್ತಿಪರರ ಪ್ರಕೋಷ್ಠದ ರಾಜ್ಯ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.



ಭಾರತೀಯ ಜನತಾ ಪಾರ್ಟಿಯ ವೃತ್ತಿಪರರ ಪ್ರಕೋಷ್ಠದ ರಾಜ್ಯ ಸಂಚಾಲಕ ಕಿರಣ್ ಕುಮಾರ್ ಈ ಕುರಿತು ಆದೇಶ ಪತ್ರ ನೀಡಿದ್ದು, ಈ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುತ್ತಾ, ಪಕ್ಷ ಸಂಘಟನೆಯನ್ನು ತಳ ಮಟ್ಟದಲ್ಲಿ ಸದೃಡ ಗೊಳಿಸುತ್ತ, ಬರುವ ಎಲ್ಲಾ ಸವಾಲುಗಳನ್ನು ಎದುರಿಸಿ, ಪಕ್ಷಕ್ಕೆ ಶಕ್ತಿ ತುಂಬಿ, ಪಕ್ಷದ ವರ್ಚಸನ್ನು ಹೆಚ್ಚಿಸಬೇಕು ಎಂದು ತಿಳಿಸಿದ್ದಾರೆ. ಅಧಿಕಾರ ವಹಿಸಿಕೊಂಡು ಶನಿವಾರ ಸಂಜೆ ಪತ್ರಕರ್ತರೊಂದಿಗೆ ಮಾತನಾಡಿದ ಗುಳಿಗಿ ವೀರೇಂದ್ರ ಕುಮಾರ್, ನಾಲ್ಕು ಜಿಲ್ಲೆಗಳ ಜಿಲ್ಲಾಧ್ಯಕ್ಷರೊಂದಿಗೆ ಸಮನ್ವಯ ಸಾಧಿಸಿ ಪಕ್ಷದ ಸಂಘಟನೆಗೆ ಒತ್ತುನೀಡಿ, ಬೂತ್ ಮಟ್ಟದಲ್ಲಿ ಬಿಜೆಪಿ ಸಂಘಟಿಸಿ ಪಕ್ಷ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಅಧಿಕಾರಕ್ಕೆ ತರುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಮುಂಬರುವ ದಿನಗಳಲ್ಲಿ ಪಕ್ಷದ ಕಾರ್ಯಕ್ರಮವನ್ನು ಮುಂಚೂಣಿ ನಾಯಕರೊಂದಿಗೆ ಹಾಗೂ ಮಂಡಲದ ಅಧ್ಯಕ್ಷರೊಂದಿಗೆ ರೂಪು ರೇಷೆಗಳ ಬಗ್ಗೆ ಚರ್ಚಿಸಿ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಗೆಲ್ಲಿಸಲು ಪಣ ತೊಡುವುದಾಗಿ ತಿಳಿಸಿದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ.**

## ಲೋಕ ಸಮರ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ, ಅಕ್ರಮ ಮದ್ಯ ಮಾರಾಟ ಮಾತ್ರ ಜೀವಂತ: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ

**ಹುನಗುಂದ :** ಲೋಕ ಸಮರದ ಚುನಾವಣಾ ನೀತಿ ಸಂಹಿತೆ ಜಾರಿಯಾಗಿ ಒಂದು ತಿಂಗಳು ಗತಿಸಿದರೂ ಕೂಡಾ ಹುನಗುಂದ ಪಟ್ಟಣದ ಪ್ರಮುಖ ಬಾರ್ಗಳಿಂದ ಬಾಕ್ಸ್ ಗಟ್ಟಲೇ ಅಕ್ರಮ ಮದ್ಯ ತಾಲೂಕಿನ ಪ್ರತಿಯೊಂದು ಹಳ್ಳಿಗಳಿಗೆ ಸರಬರಾಜು ಆಗುತ್ತಿದ್ದರೂ ಇದಕ್ಕೆ ಸಂಬಂಧಪಟ್ಟ ಅಬಕಾರಿ ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಗಳು ಅಕ್ರಮ ಸಾರಾಯಿ ತಡೆಯುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಮಾತು ಕೇಳಿ ಬರುತ್ತಿದೆ.

ಹೌದು ಲೋಕಸಭೆ ಚುನಾವಣಿ ನೀತಿ ಸಂಹಿತೆ ಆರಂಭವಾಗುತ್ತಿದ್ದಂತೆ ಹುನಗುಂದ ಮತಕ್ಷೇತ್ರ ಸಹಾಯಕಚುನಾವಣಾಧಿಕಾರಿಪಟ್ಟಣದಬಾರ್ ಮತ್ತು ಡಾಬಾಗಳ ಮಾಲಕರ ಕರೆದು ಗುಪ್ತವಾಗಿ ಮೀಟಿಂಗ್ ನಡೆಸಿ ಬಾರ್ನವರಿಗೆ ನೀವು ಇನ್ಮೇಲೆ ಬಾಕ್ಸ್ ಗಟ್ಟಲೇಯಾರಿಗಾದರೂಸರಾಯಿಕೊಟ್ಟ–ರೇಅಂತವರಹೆಸರುಮತ್ತುಅವರವಿಳಾಸವನ್ನು ತಿಳಿಸಬೇಕು ಮತ್ತು ಡಾಬಾಗಳಲ್ಲಿ ಇನ್ನು ಮುಂದೆ ಸಾರಾಯಿ ಮಾರಾಟ ಮಾಡುವಂತಿಲ್ಲವೆಂದು ಖಡಕ್ ವಾರ್ನಿಂಗ್ ನೀಡಿದ್ದರೂ ಕೂಡಾ ಅವರ ಎಚ್ಚರಿಕೆಗೆ ಕ್ಯಾರೇ ಎನ್ನದೇ ಅಲ್ಲಿಂದ ಇಲ್ಲಿವರಗೂ ಪಟ್ಟಣದ ಪ್ರಮುಖ ಬಾರ್ಗಳಿಂದ ಬಾಕ್ಸ್ ಗಟ್ಟಲೆ ಅಕ್ರಮ ಸರಾಯಿ ಮಾರಾಟಗಾರರು ನಿತ್ಯ ಬೈಕ್ಗಳಲ್ಲಿ ಹಾಡುಹಗಲೇ ತಾಲೂಕಿನ ಎಲ್ಲ ಹಳ್ಳಿಗಳಿಗೂ ಮದ್ಯ ತಗೆದುಕೊಂಡು ಹೋಗುತ್ತಿದ್ದರೂ ಅಕ್ರಮ ತಡೆಯಬೇಕಾದ ಚುನಾವಣಾಧಿಕಾರಿ ಅಕ್ರಮ ಸರಾಯಿ ತಡೆಯುವಲ್ಲಿ ಯಾಕೆ ನಿಷ್ಕಾಳಜಿ ವಹಿಸುತ್ತಿದ್ದಾರೆ ಎನ್ನುವ ಪ್ರಶ್ನೆ ಚುನಾವಣಾಧಿಕಾರಿ ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಉತ್ತರಿಸ ಬೇಕಾಗಿದೆ.

ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಅಕ್ರಮ ಸರಾಯಿ ಮಾರಾಟ ನಿಂತಿಲ್ಲಾ ಎನ್ನುವುದಕ್ಕೆ ಪ್ರತಿಯೊಂದು ಹಳ್ಳಿಗಳ ಸಾರ್ವಜನಿಕ ಸ್ಥಳದಲ್ಲಿ ಸರಾಯಿ ಕುಡಿದು ಬಿಸಾಕಿರುವ ರಾಶಿ ರಾಶಿ ಸರಾಯಿ ಪ್ಯಾ–ಕೇಟ್ ಮತ್ತು ನೀರಿನ ಕಪ್ಗಳೇ ತಾಜಾ ಉದಾಹರಣೆ ಇಲ್ಲಿದೆ.



ಅದರಲ್ಲು ತಾಲೂಕಿನ ಇದ್ದಲಗಿ,ಧನ್ನೂರ,ಕೂಡಲ ಸಂಗಮ ಕ್ರಾಸ್,ಬಿಸಲದಿನ್ನಿ ಸೇರಿದ್ದಂತೆ ತಾಲೂಕಿನ ಅನೇಕ ಗ್ರಾಮಗಳು ಅಕ್ರಮ ಮದ್ಯ ಮಾರಾಟದ ಹಾಟ್ಸ್ಪಾಟ್ ಆಗಿವೆ. ಬೈಕ್ನಲ್ಲಿ ಹಾಡು ಹಗಲೇ ಸರಾಯಿ ತಗೆದುಕೊಂಡು ಹಳ್ಳಿಗೆ ಹೋಗಿ ಮಾರಾಟ ಮಾಡುತ್ತಿದ್ದಾರೇ ಎಂದು ಸಂಬಂಧಪಟ್ಟ ಅಬಕಾರಿ ಮತ್ತು ಪೋಲೀಸ್ ಇಲಾಖೆ ಅಧಿಕಾರಿಗಳಿಗೆ ಹೇಳಿದರೂ ಯಾವುದೇ ಕ್ರಮ ತಗೆದು ಕೊಳ್ಳುತ್ತಿಲ್ಲ. ಗ್ರಾಮದಲ್ಲಿಯೇ ಸರಾಯಿ ಸಿಗುತ್ತಿರುವುದರಿಂದ ಬೆಳಂಬೆಳಗ್ಗೆ ನಮ್ಮ ಗಂಡರು ಕೆಲಸಕ್ಕೆ ಹೋಗದೇ ಸರಾಯಿ ಕುಡಿಯುತ್ತಾ ಕುಳಿತು ಕೊಳ್ಳೋದು ಮನೆಗೆ ಬಂದು ಹೆಂಡರ ಮಕ್ಕಳ ಜೊತೆ ಜಗಳ ತೆಗೆದು ಒಡಿಹೊಡೆ ಮಾಡಿತ್ತಾರೆ.ಸರಾಯಿ ಸಹವಾಸ ಹೆಂಡರಮಕ್ಕಳ ಉಪವಾಸ ಎಂಬಂತಾಗಿದೆ ನಮ್ಮ ಸಂಸಾರ ಎಂದು ನಿತ್ಯ ಮಹಿಳೆಯರು ಕಣ್ಣೀರು ಹಾಕುವಂತಾಗಿದೆ. ಇನ್ನು ನಾಮಕಾವಸ್ತೆ ಸರಾಯಿ ಮಾರುವರನ್ನು ಹಿಡಿದು ಕೊಂಡು ಹೋಗುದು ಮರಳಿ ಬಿಟ್ಟು ಬಿಡೋದು ಮಾಡುತ್ತಿರುವುದರಿಂದಲೇ ಅವರಿಗೆ ಇಲಾಖೆಯ ಅಧಿಕಾರಿಗಳ ಭಯವಿಲ್ಲದ್ದಂತಾಗಿದೆ ಎನ್ನುತ್ತಿದ್ದಾರೆ.

> **ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಪಟ್ಟಣದ ಪ್ರಮುಖ ಬಾರ್ಗಳಿಂದ ಬಾಕ್ಸ್ ಗಟ್ಟಲೇ ಸರಾಯಿಯನ್ನು ತಾಲೂಕಿನ ಅನೇಕ ಹಳ್ಳಿಗಳಿಗೆ ಬೈಕ್ನಲ್ಲಿಯೇ ಹಾಡುಹಗಲೇ ಸರಬರಾಜು ಆಗುತ್ತಿದೆ. ಇಂತಹ ಅಕ್ರಮ ಮದ್ಯವನ್ನು ನಿಲ್ಲಿಸುವಲ್ಲಿ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ. ಅಕ್ರಮ ಸರಾಯಿ ಮಾರಾಟದಿಂದ ಪ್ರತಿಯೊಂದು ಹಳ್ಳಿಗಳಲ್ಲಿ ಮಹಿಳೆಯರು ಗೋಳಾಡುತ್ತಿದ್ದು.ತಕ್ಷಣವೇ ಅಕ್ರಮ ಮದ್ಯ ಮಾರಾಟ ನಿಲ್ಲುವಂತಾಗಬೇಕು**
>
> **–ಕಿರಣ ಕಲಾಲ ಹುನಗುಂದ**

ಒಟ್ಟಾರೆಯಾಗಿ ಈಗಲಾದರೂ ಎಚ್ಚೆತ್ತುಕೊಂಡು ಚುನಾವಣಾಧಿಕಾರಿ ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮಹಿಳೆಯರ ಗೋಳನ್ನು ಕೇಳಿಯಾದರೂ ಅಕ್ರಮ ಸರಾಯಿ ತಡೆಯುತ್ತಾರಾ ಎಂಬುವುದ್ದನ್ನು ಕಾಯ್ದು ನೋಡಬೇಕಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ ಹುನಗುಂದ**

## ಶಿವಶರಣೆ ಅಕ್ಕಮಹಾದೇವಿಯವರ ಜೀವನಾದರ್ಶಗಳು ಇಂದಿನ ಮಹಿಳೆಯರಿಗೆ ದಾರಿ ದೀಪ: ಕಡಪಟ್ಟಿ

**ಹುನಗುಂದ :** ಸಮಾಜದಲ್ಲಿ ಮಹಿಳೆಯರಿಗೂ ಪುರುಷ ರಷ್ಟೇ ಸರಿ ಸಮಾನ ಸ್ಥಾನಮಾನ ಕಲ್ಪಿಸಬೇಕೆಂದು 12 ನೇ ಶತಮಾನದಲ್ಲಿಯೇ ಹೋರಾಟ ಮಾಡಿದ ವಚನಗಾರ್ತಿ ಅಕ್ಕಮಹಾದೇವಿಯು ಇಂದಿನ ಮಹಿಳೆಯರ ಬದುಕಿಗೆ ಆದರ್ಶಪ್ರಾಯ ಎಂದು ವಿ.ಮ ಸಂಘದ ಗೌರವ ಕಾರ್ಯದರ್ಶಿ ಡಾ.ಮಹಾಂತೇಶ ಕಡಪಟ್ಟಿ ಹೇಳಿದರು.

ಪಟ್ಟಣದ ಶ್ರೀ ವಿಜಯ ಮಹಾಂತೇಶ ಉಚಿತ ಪ್ರಸಾದ ನಿಲಯದಲ್ಲಿ ಅಕ್ಕಮಹಾದೇವಿ ಮಹಿಳಾ ಬಳಗದ ಸಹಯೋಗದಲ್ಲಿ ಅಕ್ಕಮಹಾದೇವಿಯ 73 ನೇ ಜಯಂತಿಯನ್ನು ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ಸಮಾಜದಲ್ಲಿ ಸಾಮರಸ್ಯ ಮೂಡಿಸಲು,ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದ ಅಕ್ಕಮಹಾ ದೇವಿಯವರ ಹೆಸರು ಇತಿಹಾಸದ ಪುಟದಲ್ಲಿ ಉಳಿದು ಕೊಂಡಿದ್ದು,ಅವರ ಆದರ್ಶಗಳು ಇಂದಿನ ಮಹಿಳೆಯರಿಗೆ ದಾರಿ ದೀಪವಾಗಿದೆ ಜೀವನದ ಸತ್ಯಗಳನ್ನು ಆಧ್ಯಾತ್ಮಿಕ ನಿಧಿಯ ರತ್ನಗಳನ್ನು ನಿರೂಪಿಸಿ,

ಅದನ್ನು ಪಡೆಯುವ ವಿಧಾನವನ್ನು ತಿಳಿಸಿಕೊಡುವ ಧರ್ಮವು ಯಾರೊಬ್ಬರ ಆಸ್ತಿಯೂ ಅಲ್ಲ ಎಂದು ಸಾರಿದ ಅಕ್ಕಮಹಾದೇವಿ ಮಹಿಳಾ ಸಮಾಜದ ಮೇರು ಪರ್ವತವಾಗಿ ಬೆಳಗಿದರು.ಶಿವಶರಣೆ



ಅಕ್ಕಮಹಾದೇವಿಯಂತೆ ಮಹಿಳೆಯರು ಧೈರ್ಯ ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದರು.

ಅಕ್ಕನ ಬಳಗದ ಅಧ್ಯಕ್ಷೆ ದೊಡ್ಡಮ್ಮ ಹವಾಲ್ದಾರ ಮಾತನಾಡಿ,ಮುಖಂಡರಾದ ಸಂಗಣ್ಣ ಚಿನಿವಾಲ, ಬಸವರಾಜ ಕೆಂದೂರ,ಎಂ.ಎಸ್.ಮಠ.ಅರುಣೋದಯ ದುದ್ಗಿ,ರಾಮನಗೌಡ ಬೆಳ್ಳಿಹಾಳ,ಶಿವಪ್ಪ ನಾಗೂರ,ಡಾ,ಶಿವಶಂಕರ ಮುದಗಲ್,ರವಿ ಹುಚನೂರ,ಬಸವರಾಜ ರಕ್ಕಸಗಿ,ರಾಚಪ್ಪ ರಾಜಮನಿ,ಸಂಗಣ್ಣ ಎಮ್ಮಿ,ವಿ.ಎಸ್.ಕಠಾಣಿ,ಪಿ. ಆರ್.ಪೂಜಾರಿ,ಬಣಜಿಗ ಸಮಾಜದ ಮಹಿಳಾ ಅಧ್ಯಕ್ಷೆ ರಾಣಿ ತೋಪಲಕಟ್ಟಿ, ಅಕ್ಕಮಹಾದೇವಿ ಮಹಿಳಾ ಸಂಘದ ಸದಸ್ಯರಾದ ದೀಪಾ ಸುಂಕದ,ಮೀನಾಕ್ಷಿ ಕುಂಟೋಜಿ,ಜ್ಯೋತಿ ವಡವಡಗಿ,ಶೋಭಾ ಲೆಕ್ಕಿಹಾಳ,ಮಂಜುಳಾ ಕಾಶಿನದಡ್ಡಿ,ಶೋಭಾ ಗೊಣ್ಣಾಗಾರ, ಮಹಾಂತಮ್ಮ ಹೊಸೂರ, ಅನ್ನಪೂರ್ಣ ಹೊಸೂರ, ವಿಜಯಲಕ್ಷ್ಮಿ ?ಮೇ ಚಿನಿವಾಲರ,ವಂದನಾ ಅಂಕದ,ಅನ್ನಪೂರ್ಣ ದೇವರಡ್ಡಿ,

ಶೀವಲೀಲಾ ಅಂಟರತಾನಿ, ಅಮರಮ್ಮ ತೋಟಗೇರ, ವಿಜಯಲಕ್ಷ್ಮಿ ನೇರೆಗಲ್ಲ ಮೀನಾಕ್ಷಿ ಪಟ್ಟಣಶೆಟ್ಟಿ ಸೇರಿದ್ದಂತೆ ಅನೇಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ ಹುನಗುಂದ**

## ಸಡಗರದಿಂದ ಹೊಸಹಳ್ಳಿ ಶ್ರೀ ಕಲ್ಲೇಶ್ವರ ರಥೋತ್ಸವ

**ಹೊಸಹಳ್ಳಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಹೋಬಳಿಯ ಹೊಸಹಳ್ಳಿ ಗ್ರಾಮ ಶ್ರೀ ಕಲ್ಲೇಶ್ವರ ರಥೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು.

ಶ್ರೀ ಕಲ್ಲೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇವಸ್ಥಾನದಿಂದ ಸಕಲ ವಾದ್ಯಗಳೊಂದಿಗೆ ರಥದ ಬಳಿ ತಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಸ್ವಾಮಿಯ ರಥ ಮುಂದೆ ಸಾಗುತ್ತಿದ್ದಂತೆ ನೆರೆದಿದ್ದ ಭಕ್ತರು ಜಯಘೋಷ ಹಾಕಿ. ಬಾಳೆಹಣ್ಣು. ಉತ್ತುತ್ತಿ .ಮಂಡಕ್ಕಿ. ಎಸೆದು ಭಕ್ತಿ ಸಮರ್ಪಿಸಿದರು.

ರಥಕ್ಕೆ ಪೂಜೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಹೊಸಹಳ್ಳಿ ಗ್ರಾಮದ ದೈವಸ್ಥರು. ಭಕ್ತರು ಸೇರಿದಂತೆ ಸುತ್ತ ಮುತ್ತಲ ಗ್ರಾಮದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಸ್ವಾಮಿಯ ದರ್ಶನ ಪಡೆದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್. ಕಾನಾ ಹೊಸಹಳ್ಳಿ.**



## ಗಿಣಿಗೇರಾ ನರೇಗಾ ಕಾಮಗಾರಿ ಸ್ಥಳದಲ್ಲಿ ಸ್ವೀಪ್ ಕಾರ್ಯಕ್ರಮ

## ಮತದಾನದ ಪವಿತ್ರ ಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳೋಣ: ಗಿಣಿಗೇರಾ ಪಿಡಿಓ



**ಕೊಪ್ಪಳ :** ಮತದಾನ ಎನ್ನುವದು ಪವಿತ್ರ ಕಾರ್ಯ. ಪ್ರಜಾಪ್ರಭುತ್ವದಲ್ಲಿ ಮತ ಚಲಾವಣೆಗೆ ಅವಕಾಶ ಇರುವದು ಸಂವಿಧಾನವು ನಮಗೆ ದೊಡ್ಡ ಕೊಡುಗೆಯಾಗಿದೆಂದು ಗಿಣಿಗೇರಾ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಂಜುಳಾ ದೇವಿ ಹೂಗಾರ ಹೇಳಿದರು.

ಬುಧವಾರದಂದು ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮ ಪಂಚಾಯತಿಯ ನರೇಗಾ ಕಾಮಗಾರಿ ಸ್ಥಳವಾದ ಗಿಣಿಗೇರಾ ಗ್ರಾಮದ ಕೆರೆ ಕಾಮಗಾರಿಯಲ್ಲಿ ಗ್ರಾಮ ಪಂಚಾಯತಿ ಸ್ವೀಪ್ ಸಮಿತಿ ವತಿಯಿಂದ ಕೂಲಿಕಾರರಿಗೆ ಜರುಗಿದ ಸ್ವೀಪ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೇ–7ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವುದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಚುನಾವಣೆ ಆಯೋಗ ನಿಗದಿಪಡಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಸ್ವೀಪ್ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಜಾಗೃತಿ ಮೂಡಿಸಲಾಗುತ್ತಿದ್ದು, ನರೇಗಾ ಕೂಲಿಕಾರರು ಮತದಾನ ಮಾಡಿ ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು.

ಕಳೆದ ಬಾರಿಗಿಂತ ಈ ಬಾರಿ ವಿನೂತನವಾಗಿ ಸ್ವೀಪ್ ಕಾರ್ಯಕ್ರಮಗಳನ್ನು ಜರುಗಿಸುವ ಮೂಲಕ ಜಿಲ್ಲೆಯ ಮತದಾನ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ನಾವೆಲ್ಲರೂ ಚುನಾವಣಾ ಆಯೋಗಕ್ಕೆ ಕೈ ಜೋಡಿಸೋಣ. ಮತದಾನ ಪವಿತ್ರವಾದ ಕಾರ್ಯ. ಮತದಾನ ಮೂಲಕ ದೇಶಕ್ಕೆ ದೊಡ್ಡ ಕೊಡುಗೆ ನೀಡಿ–ದಂತಾಗುತ್ತದೆ. ಸ್ವೀಪ್ ಕಾರ್ಯಕ್ರಮದಲ್ಲಿ ಸೇರಿರುವ ಎಲ್ಲಾ ನರೇಗಾ ಕೂಲಿಕಾರರು ನಿಮ್ಮ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರು ಮತ ಚಲಾಯಿಸುವ ಮೂಲಕ ದೇಶಕ್ಕೆ ಸುಭದ್ರ ಆಡಳಿತ ಒದಗಿಸಲು ಕೈ ಜೋಡಿಸಿ. ಮತ ಚಲಾವಣೆ ತುಂಬಾ ಜವಾಬ್ದಾರಿಯುತವಾದ ಕಾರ್ಯ. ಆ ಮೂಲಕ ನಾವುಗಳು ಯಾವುದೇ ಆಸೆ, ಅಮೀಷಗಳಿಗೆ ಬಲಿಯಾಗದೇ ನಿರ್ಭಯವಾಗಿ ಮತ ಚಲಾಯಿಸಬೇಕೆಂದು ಕರೆ ನೀಡಿದರು. ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಸ್ವೀಪ್ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಮಂಜುನಾಥ ಭಾವಿಕಟ್ಟಿ, ತಾಂತ್ರಿಕ ಸಹಾಯಕಿ ಅಕ್ಷತಾ ಕುಮಾರಿ, ಬೇರ್ ಫೂಟ್ ಟೆಕ್ನಿಷಿಯನ್ ದಾವಲಸಾಬ ಮುಲ್ಲಾ, ಕರವಸೂಲಿಗಾರ ಈಶ್ವರಯ್ಯ, ಡಿಇಓ ರಾಜಾಭಕ್ಷಿ, ನೀರಗಂಟಿ ಶ್ರೀಕಾಂತ ಪೂಜಾರ, ಕಾಯಕ ಬಂಧುಗಳು, 825 ನರೇಗಾ ಕೂಲಿಕಾರರು ಭಾಗವಹಿಸಿದ್ದರು.

## ಹಿಡಕಲ್ ಜಲಾಶಯದಿಂದ ಕೃಷ್ಣಾ ನದಿಗೆ ಒಂದು ಟಿಎಂಸಿ ನೀರು

**ರಬಕವಿ–ಬನಹಟ್ಟಿ :** ಹಿಡಕಲ್ ಜಲಾಶಯದಿಂದ ಕೃಷ್ಣಾ ನದಿಗೆ ಒಂದು ಟಿಎಂಸಿ ನೀರು ಬಿಡುಗಡೆ ಮಾಡಲು ಅಧಿಕಾರಿಗಳು ಶುಕ್ರವಾರ ಆದೇಶ ಮಾಡಿದ್ದಾರೆ ಎಂದು ಶಾಸಕ ಸಿದ್ದೂ ಸವದಿ ತಿಳಿಸಿದರು.

ಶುಕ್ರವಾರ ಪತ್ರಿಕೆಯ ಜೊತೆಗೆ ಮಾತನಾಡಿದ ಶಾಸಕ ಸವದಿ, ಯಬರಟ್ಟಿ ಹಾಗೂ ತೇರದಾಳ ಸೀಮೆಯಲ್ಲಿಯ ಕಾಲುವೆ ಮೂಲಕ ನೀರು ಹರಿಸಲಾಗುವುದು. ಒಂದು ಟಿಎಂಸಿ ನೀರು ಕೃಷ್ಣಾ ನದಿಗೆ ಹರಿಸುವುದರಿಂದ ಬೇಸಿಗೆಯಲ್ಲಿ



ನೀರಿನ ಸಮಸ್ಯೆಯಾಗುವುದಿಲ್ಲ.

ಈ ದಿಶೆಯಲ್ಲಿ ಬೆಳಗಾವಿ ಪ್ರಾದೇಶಿಕ ಆಯುಕ್ತರಿಗೆ, ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಎರಡು ಟಿಎಂಸಿ ನೀರು ಬಿಡಲು ಮನವಿ ಮಾಡಿಕೊಳ್ಳಲಾಗಿತ್ತು. ಈಗ ಒಂದು ಟಿಎಂಸಿ ನೀರು ಬಿಡುಗಡೆ ಮಾಡಲು ಆದೇಶ ಮಾಡಲಾಗಿದೆ.

ಮನವಿಗೆ ಸ್ಪಂದಿಸಿದ ಅಧಿಕಾರಿಗಳು ನೀರು ಬಿಡುಗಡೆ ಮಾಡಿದ್ದು , ಇದರಿಂದ ಜನ, ಜಾನುವಾರಗಳಿಗೆ ಕುಡಿಯುವ ನೀರಿಗಾಗಿ ಅನುಕೂಲವಾಗಲಿದೆ ಎಂದು ಶಾಸಕ ಸಿದ್ದೂ ಸವದಿ ತಿಳಿಸಿದರು.

# ಬ್ಯಾಂಕ್ ಹಾಗೂ ಅಂಚೆ ಕಚೇರಿಗಳಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ ಆಯೋಜನೆ

**ವಿಜಯಪುರ :** ಮತದಾನದ ದಿನದಂದು ಕಡ್ಡಾಯವಾಗಿ ಮತಗಟ್ಟೆಗಳಿಗೆ ತೆರಳಿ ಎಲ್ಲರೂ ಮತದಾನ ಮಾಡಬೇಕು. ಮತದಾನ ದಿನದಂದು ಮತಗಟ್ಟೆಗಳಲ್ಲಿ ನೆರಳಿನ ವ್ಯವಸ್ಥೆ, ಕುಡಿಯುವ ನೀರು, ವಿಶೇಷಚೇತನರಿಗೆ ರ್‍ಯಾಂಪ್ ವ್ಯವಸ್ಥೆ, ಮತ್ತು ಇತರೆ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. ಮತದಾನ ಮಾಡಿ ಚುನಾವಣೆ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೊಡೆಲ್ ಅಧಿಕಾರಿ ಸಿ.ಆರ್. ಮುಂಡರಗಿ ಹೇಳಿದರು.

ಮಂಗಳವಾರ ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಇವರ ಸಹಯೋಗದಲ್ಲಿ ಜಿಲ್ಲಾ ವಿಜಯಪುರ ನಗರದ ವಿವಿಧ ಬ್ಯಾಂಕ್‌ಗಳಿಗೆ ಹಾಗೂ ಅಂಚೆ ಕಛೇರಿಗಳಿಗೆ ತೆರಳಿ ಬ್ಯಾಂಕ್ ಅಧಿಕಾರಿಗಳು, ಸಿಬ್ಬಂದಿಯವರು ಹಾಗೂ ಗ್ರಾಹಕರಿಗೆ ಹಮ್ಮಿಕೊಂಡ ಮತದಾರರ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ನರೇಂದ್ರಬಾಬು ಮಾತನಾಡಿ, ಮತದಾನ ಮಾಡುವುದು ನಮ್ಮ ಹಕ್ಕು, ಅಷ್ಟೇ ಅಲ್ಲದೇ ನಮ್ಮ ಜವಾಬ್ದಾರಿಯೂ ಸಹ. ತಾವೆಲ್ಲರೂ ಮತದಾನ ಮಾಡಿದರೆ ಮಾತ್ರ ನಮ್ಮ ದೇಶ ಅಭಿವೃದ್ಧಿಯಾಗಲು ಸಾಧ್ಯ. ನಿಮ್ಮ ಒಂದು ಮತ ದೇಶಕ್ಕೆ ಅತೀ ಮುಖ್ಯ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ ಎಂದರು.

ಸ್ಟೇಟ್ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕರಾದ ವಾಣಿಶ್ರೀ ಉಮರಾಣಿ ಮಾತನಾಡಿ, ವಿಶೇಷವಾಗಿ ಜಿಲ್ಲೆಯ ಪ್ರತಿ ಮತಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೋಸ್ಕರ ಮಹಿಳಾ ಸ್ನೇಹಿ ಮತಗಟ್ಟೆ(ಪಿಂಕ್/ಸಖಿ



ಬೂತ್)ಗಳನ್ನು ಅಲಂಕರಿಸಲಾಗಿದೆ. ಆದ್ದರಿಂದ ಎಲ್ಲ ಮಹಿಳೆಯರು ನಿರ್ಭೀತಿಯಿಂದ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡಬೇಕು ಎಂದರು.

ಬಳಿಕ ಎಲ್ಲರೂ ಮತದಾರರ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು ಮತ್ತು ಮತದಾನ ಜಾಗೃತಿಯ ಘೋಷಣೆಗಳನ್ನು ಕೂಗಿದರು. ವಿವಿಧ ಬ್ಯಾಂಕ್ ಗಳ ಗೋಡೆಗಳ ಮೇಲೆ ಮತದಾನ ಜಾಗೃತಿಯ ವಿವಿಧ ಪೋಸ್ಟರ್ ಗಳನ್ನು ಅಂಟಿಸಲಾಯಿತು. ಮತದಾನ ಜಾಗೃತಿಯ ಕರಪತ್ರಗಳನ್ನು ಬ್ಯಾಂಕ್ ಗಳ ವ್ಯವಸ್ಥಾಪಕರಿಗೆ ಹಸ್ತಾಂತರಿಸಲಾಯಿತು.

ಜಿಲ್ಲಾ ಅಂಚೆ ಕಚೇರಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ:

ವಿಜಯಪುರ ಜಿಲ್ಲೆಯ ಅಂಚೆ ವಿಭಾಗ ಕಚೇರಿಗೆ ಭೇಟಿ ನೀಡಿ ಅಂಚೆ ಇಲಾಖೆಯಲ್ಲಿ ಮತದಾನ ಜಾಗೃತಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಕಛೇರಿಯ ಅಧೀಕ್ಷಕರಾದ ಜಿ. ಬಿ ನಾಯಕರವರೊಂದಿಗೆ ಚರ್ಚಿಸಲಾಯಿತು. ಜಿಲ್ಲಾ ಸ್ವೀಪ್ ಸಮಿತಿಯ ವತಿಯಿಂದ ಮತದಾನ ಜಾಗೃತಿಗಾಗಿ ತಯಾರಿಸಿರುವ ಶೀಲುಗಳು, ಕರಪತ್ರಗಳು ಮತ್ತು ಪೋಸ್ಟರ್ ಗಳನ್ನು ಹಸ್ತಾಂತರಿಸಲಾಯಿತು. ಮತದಾನ ಪ್ರಮಾಣ ಹೆಚ್ಚಿಸಲು ವಿಜಯಪುರ ಜಿಲ್ಲೆಯ ಅಂಚೆ ವಿಭಾಗದ ಅಡಿಯಲ್ಲಿ ಬರುವ ಎಲ್ಲ ಅಂಚೆ ಕಛೇರಿಗಳಿಗೆ ಬರುವ ಗ್ರಾಹಕರಿಗೆ ಮತದಾನ ಜಾಗೃತಿ ಮೂಡಿಸಿ ಜಿಲ್ಲಾ ಪಂಚಾಯತಿಗೆ ಮಾಹಿತಿ ನೀಡಲು ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿಗಳಾದ ಎ. ಬಿ. ಅಲ್ಲಾಪೂರ, ಕೆನರಾ ಬ್ಯಾಂಕ್ ಮುಖ್ಯ ವ್ಯವಸ್ಥಾಪಕರಾದ ದಾರಾವತ್ ವೀರಣ್ಣ, ಹಿರಿಯ ವ್ಯವಸ್ಥಾಪಕರಾದ ವಿಷ್ಣುವರ್ಧನ ರೆಡ್ಡಿ, ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಅನಿಲ ಮೋರೆ, ಸ್ಟೇಟ್ ಬ್ಯಾಂಕ್‌ನ ಕ್ರೆಡಿಟ್ ಮ್ಯಾನೆಜರ್ ಕೃಷ್ಣಯ್ಯ, ಆಪರೇಷನ್ಸ್ ಮ್ಯಾನೇಜರ್ ಪಿ.ಆರ್ ದೇಸಾಯಿ, ಅಂಚೆ ವಿಭಾಗದ ಉಪ ಅಧೀಕ್ಷಕರಾದ ವ್ಹಿ. ವ್ಹಿ. ನಿಂಬರಗಿ, ಕಚೇರಿ ಸಹಾಯಕರಾದ ವ್ಹಿ. ಎಸ್. ಉಮರಾಣಿ, ವಿವಿಧ ಬ್ಯಾಂಕ್ ಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ, ಜಿಲ್ಲಾ ಪಂಚಾಯತಿಯ ಸಿ. ಸಿ ಕುಲಕರ್ಣಿ, ವಿಶ್ವನಾಥ ಶಹಾಪೂರ, ಸುವರ್ಣ ಭಜಂತ್ರಿ, ಹಾಗೂ ಇತರರು ಉಪಸ್ಥಿತರಿದ್ದರು.

# ಅಗ್ನಿ ಅವಘಡ ಮುಂಜಾಗ್ರತಾ ಅರಿವು ಅಗತ್ಯ: ಶಿಕ್ಷಕ ಜಗದೀಶ ಸಾಲಳ್ಳಿ





**ವರದಿ: ಲಾಲಸಾಬ ಸವಾರಗೋಳ**

**ವಿಜಯಪುರ :** ಆಕಸ್ಮಿಕವಾಗಿ ಅಗ್ನಿ ಅವಘಡವಾದಾಗ ಭಯಪಡದೆ ನೀರು, ಗಿಡದ ತಪ್ಪಲು, ಮಣ್ಣು ಬಳಸಿ ಬೆಂಕಿ ನಂದಿಸಿ ಮುಂದಾಗುವ ಭಾರೀ ಅನಾಹುತ ತಪ್ಪಿಸಬಹುದು ಎಂದು ಎನ್.ಟಿ.ಪಿ.ಎಸ್.ಸಿ. ಆಯ್. ಎಸ್. ಎಫ್. ನ ಅಗ್ನಿಶಾಮಕ ದಳದ ಫೈರ್ ಹೆಡ್ ಕಾನ್ಸಟೇಬಲ್ ಬಿನ್ನಾಳ ಈಶ್ವರ ತಿಳಿಸಿದರು.

ಕೊಲ್ಹಾರ ತಾಲ್ಲೂಕಿನ ಮಸೂತಿ ಗ್ರಾಮದ ಶ್ರೀ ಗುರು ಸಂಗನ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ಜಗದೀಶ ಸಾಲಳ್ಳಿ ವಿನಂತಿ ಮೇರೆಗೆ ಅಗ್ನಿ ಶಾಮಕ ಸಪ್ತಾಹದ ಅಂಗವಾಗಿ ಅಗ್ನಿ ಸುರಕ್ಷತೆ ಹಾಗೂ ಅಗ್ನಿ ಅವಘಡ ಮುಂಜಾಗ್ರತಾ ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾಹಿತಿ ನೀಡಿದರು.

ಬೇಸಿಗೆ ರಜೆಯಲ್ಲಿರುವ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ಅಣುಕು ಪ್ರದರ್ಶನ ಹಾಗೂ ಬೆಂಕಿ ನಂದಿಸುವ ಸಲಕರಣೆ ಬಳಸುವ ವಿಧಾನ,ಮನೆಯಲ್ಲಿ ಎಲ್. ಪಿ. ಜಿ. ಗ್ಯಾಸ್ ಸೋರಿಕೆ ಸಂಧರ್ಭದಲ್ಲಿ ನಾವು ಕೈಗೊಳ್ಳುವ ಮುಂಜಾಗ್ರತಾ ಕ್ರಮದ ಕುರಿತು ಸವಿಸ್ತಾರವಾಗಿ ವಿವರಿಸಿದರು.

ಶಿಕ್ಷಕ ಜಗದೀಶ ಸಾಲಳ್ಳಿ ಮಾತನಾಡಿ ಅಗ್ನಿಶಾಮಕ ದಳದ ಸಿಬ್ಬಂದಿ ಆಕಸ್ಮಿಕವಾಗಿ ಸಂಭವಿಸುವ ಅಗ್ನಿ ಅನಾಹುತ ತಪ್ಪಿಸಲು ಜೀವದ ಹಂಗು ತೊರೆದು ನಮ್ಮೆಲ್ಲರ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಅವರ ಕಾರ್ಯ ಶ್ಲಾಘನೀಯ. ಜೊತೆಗೆ ಮಕ್ಕಳು ಹಾಗೂ ಜನರಲ್ಲಿ ಅರಿವು ಮೂಡಿಸುವುದರಿಂದ ಮುಂದಾಗುವ ಹೆಚ್ಚಿನ ಅನಾಹುತ ತಪ್ಪಿಸಬಹುದು ಈ ಜಾಗ್ರತಿ ಮಕ್ಕಳಿಗೆ ಅಗತ್ಯವಾಗಿತ್ತು ಎಂದರು.

ಅಗ್ನಿಶಾಮಕ ದಳದ ಕಾನ್ಸಟೇಬಲ್ ಆಯ್. ಪಿ. ಮುತ್ತನ್ನವರ, ಸಿ. ಎ. ಗೂಗಿಹಾಳ, ಚಾಲೆಂಜ್ ಕೋಚಿಂಗ್ ಕ್ಲಾಸಿಸ್ ನ ಮಲ್ಲಿಕಾರ್ಜುನ ಪಾಟೀಲ ಹಾಗೂ ಮಕ್ಕಳು, ಗ್ರಾಮಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಗೌರವಿಸಿ ಸನ್ಮಾನಿಸಲಾಯಿತು.

# ಪಠ್ಯಗಳು ಬದಲಾವಣೆಯಾದಲ್ಲಿ ಶಿಕ್ಷಣದಲ್ಲಿ ಬದಲಾವಣೆ ಕಾಣಲು ಸಾಧ್ಯ

**ಬಸವನಬಾಗೇವಾಡಿ:** ಪ್ರತ್ರಿ 10ವರ್ಷಕ್ಕೊಮ್ಮೆ ಪಠ್ಯಗಳು ಬದಲಾವಣೆ ಯಾಗಬೇಕು ಆದಾಗ ಮಾತ್ರ ಶಿಕ್ಷಣದಲ್ಲಿ ಬದಲಾವಣೆ ಕಾಣಲು ಸಾಧ್ಯ ಎಂದು ಯುವ ಮುಖಂಡ ವಕೀಲ ಗೋಪಾಲ ಚಿಂಚೋಳಿ ಅಭಿಪ್ರಾಯಪಟ್ಟರು.

ಪಟ್ಟಣದ ಗಣಪತಿ ವೃತ್ತದಲ್ಲಿ ವೀರಭದ್ರೇಶ್ವರ ಗಜಾನನ ಯುವಕ ಮಂಡಳಿಯವರು ಗಣಪತಿ ಚೌಕಿನ ಓಣಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ರಷ್ಟು ಗಳಿಸಿ ಉತ್ತಮ ಸಾಧನೆ ಮಾಡಿದ ಹಾಗೂ ಸೈನಿಕ ಶಾಲೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು ಶಿಕ್ಷಣ ನೀತಿ ಬದಲಾಗಬೇಕು ಅದು ಉದ್ಯೋಗ ಆಧಾರಿತ ಶಿಕ್ಷಣ ಸಿಕ್ಕಲ್ಲಿ ವಿದ್ಯಾರ್ಥಿ ಗಳು ಪ್ರಗತಿ ಹೊಂದಲು ಸಾಧ್ಯ, ವಿದ್ಯಾರ್ಥಿಗಳು ನಿತ್ಯ ಜೀವನದಲ್ಲಿ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು, ಓದುವ ಹವ್ಯಾಸ ಬೆಳೆಸಿಕೊಳ್ಳುವ ಮೂಲ ಗ್ರಂಥಾಲಯವಾಗಿದೆ ಎಂದು ಹೇಳಿದರು.

ಎಲ್ ಐಸಿ ನಿವೃತ್ತ ನೌಕರ ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಮಾತನಾಡಿ ಶಿಕ್ಷಣದಲ್ಲಿ ಎಷ್ಟೇ ಮುಂದೆವರೆದರು ಸಮಾ ಜದೊಂದಿಗೆ ಬೆರೆಯಬೇಕು, ಸಮಾಜದೊಂದಿಗೆ ಬೆರೆತು ಸಮಾ ಜದ



ಋಣ ತೀರಿಸಬೇಕು ಎಂದು ಹೇಳಿದರು.

ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ ಆಸ್ತಿ ಗಳಿಕೆ ಕ್ಷಣಿಕ ಮಾತ್ರ ವಿದ್ಯೆ ನಮ್ಮ ಜೀವನ ಉದ್ದಕ್ಕೂ ಬರುತ್ತದೆ, ಆದ್ದರಿಂದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು, ಯುವಕ ಸಂಘದವರು ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಕಾರ್ಯವೆಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಅಶೋಕ ಸಂಪನ್ನವರ, ರಾಜು ಇವಣಗಿ, ಮತಾಬ್ ಬೊಮ್ಮನಳ್ಳಿ, ಅಶೋಕ ಮುಳವಾಡ, ಶ್ರೀಕಾಂತ ಬಸರಕೋಡ, ಅಶೋಕ ಬಾಗೇವಾಡಿ, ಅನೀಲ ಮುಳವಾಡ, ಚನ್ನು ಹಡಪದ, ರೇವಣಸಿದ್ಧ ಜಾಡರ ಇದ್ದರು.

ಪ್ರತಿಭಾ ಧನ್ವಂತರಿ ವಚನ ನೃತ್ಯಗೈದಳು,ಸುಭಾಸ ಹಡಪದ ನಿರೂಪಿಸಿದರು, ಶ್ರೀಶೈಲ ಶಿರಗುಪ್ಪಿ ಸ್ವಾಗತಿಸಿದರು, ನಾಗೇಶ ನಾಗೂರ ವಂದಿಸಿದರು. ಇದೇ ಸಂದರ್ಭದಲ್ಲಿ ಕಲಾ ವಿಭಾಗದಲ್ಲಿ ಓಣಿಯ ವಿದ್ಯಾರ್ಥಿನಿ ಶೇ.97ರಷ್ಟು ಅಂಕ ಗಳಿಸಿದ ಸೃಷ್ಟಿ ನಾಗೋಡ, ವಿಜ್ಞಾನ ವಿಭಾಗದಲ್ಲಿ ಶೇ.93ರಷ್ಟು ಅಂಕ ಗಳಿಸಿದ ಗುರುಪಾದ ಬಸರಕೋಡ, ಶೇ.92ರಷ್ಟು ಅಂಕ ಗಳಿಸಿದ ಭಾಗ್ಯ ತುಂಬಗಿ ಸೇರಿ 13ಜನ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.

# ಸುಕ್ಷೇತ್ರ ಮಲ್ಲಾಪೂರದ ಶ್ರೀ ಮಲ್ಲಿಕಾರ್ಜುನ ದೇವರ ಮಹಾರಥೋತ್ಸವ

**ಮಲ್ಲಾಪೂರ (ಬಾಗಲಕೋಟ) :** ಉತ್ತರ ಕರ್ನಾಟಕದ ಪವಿತ್ರ ಸುಕ್ಷೇತ್ರಗಳಲ್ಲಿ ಒಂದಾದ ಮಲ್ಲಾಪೂರ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನವು ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಮುಳುಗಡೆಯಾದ ಗ್ರಾಮ ಮಲ್ಲಾಪೂರದ ನಿಸರ್ಗ ರಮಣೀಯ ತಾಣ ಕೃಷ್ಣಾ, ಘಟಪ್ರಭಾ ನದಿಗಳ ತೀರದಲ್ಲಿ ಗುಡ್ಡದ ನೆತ್ತಿಯ ಮೇಲೆ ನೆಲಗೊಂಡಿರುವ ಶತಮಾನಗಳ ಇತಿಹಾಸ ಪ್ರಸಿದ್ಧ ಪವಿತ್ರ ಸುಕ್ಷೇತ್ರ ಶ್ರೀ ಮಲ್ಲಿಕಾರ್ಜುನ ದೇವಸ್ಥಾನವು ಬಾಗಲಕೋಟೆ ಹಾಗೂ ಸುತ್ತಲಿನ ನೂರಾರು ಹಳ್ಳಿಗಳ ಅಪಾರ ಭಕ್ತಸಮೂಹದ ಶ್ರದ್ಧಾಭಕ್ತಿ ಕೇಂದ್ರವಾಗಿದೆ. ಪ್ರತಿವರ್ಷ ಶ್ರಾವಣಮಾಸದ





ಕೊನೆಯ ಸೋಮವಾರ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆದುಕೊಂಡು ಬರುತ್ತಿರುವಾಗ 1998 ಎಪ್ರಿಲ್ 4 ರಿಂದ ಹೊಸ ತೇರನ್ನು ನಿರ್ಮಿಸಿ ಪ್ರತಿವರ್ಷ ಯುಗಾದಿಯ ಸಮೀಪದ ದವನದ ಹುಣ್ಣಿಮೆಯಂದು ಮಹಾರಥೋತ್ಸವವನ್ನು ಪ್ರಥಮ ಬಾರಿಗೆ ಅತ್ಯಂತ ವಿಜೃಂಭಣೆಯಿಂದ ಜರುಗಿಸಲಾಯಿತು. ಅಂದಿನಿಂದ ಇಂದಿನವರೆಗೂ ಈ ಸತ್ ಸಂಪ್ರದಾಯದಂತೆ ಪ್ರತಿ ವರ್ಷದಲ್ಲಿ ಶ್ರಾವಣ ಸೋಮವಾರದಂದು ಹಾಗೂ ಯುಗಾದಿಯ ಸಮಿಪದ ದವನದ ಹುಣ್ಣಿಮೆಯಂದು ಮಹಾರಥೋತ್ಸವದ ನಿಮಿತ್ಯ ಪ್ರತಿ ವರ್ಷ ಎರಡು ಸಲ ಶ್ರೀ ಮಲ್ಲಿಕಾರ್ಜುನ ದೇವರ ಜಾತ್ರೆಯು ಜರುಗುತ್ತಿರುವುದು ಈ ಸುಕ್ಷೇತ್ರದ ವಿಶೇಷತೆಯಾಗಿದೆ. ಬಾಗಲಕೋಟೆಯ ಪ್ರಸಿದ್ಧ ಶಿಲ್ಪಿ ಶ್ರೀಯುತ ಮಲ್ಲಪ್ಪ ಮಾಯಾಚಾರಿಯವರಿಂದ ತಯಾರಿಸಲ್ಪಟ್ಟ ಈ ತೇರು ಸುಂದರ ಕುಸುರಿನ ಕೆತ್ತನೆಯಿಂದ ಕೂಡಿದ್ದು ಕಣ್ಮನ ಸೆಳೆಯುವ ಸೊಗಸಾದ ತೇರಾಗಿದೆ. ಇದು 24 ಅಡಿ ಎತ್ತರದ ಸಾಗವಾನಿ ಕಟ್ಟಿಗೆಯ ತೇರಾಗಿದ್ದು, ಈ ನೂತನ ತೇರಿನ ನಿಮಿತ್ಯ ದವನದ ಹುಣ್ಣಿಮೆಯಂದು ಮಹರಥೋತ್ಸವವನ್ನು ಜರುಗುತ್ತಿರುವುದನ್ನು ನೋಡುವುದು ಕಣ್ಣುಗಳಿಗೆ ಹಬ್ಬವೇ ಸರಿ. ಈ ತೇರಿಗೆ ಕಳೆದ ವರ್ಷ ಈ ತೇರಿನ ರಜತ ಮಹೋತ್ಸವವನ್ನು ಭಕ್ತ ಸಮೂಹವು ಅತ್ಯಂತ ಅದ್ದೂರಿಯಾಗಿ ಶ್ರದ್ಧಾ–ಭಕ್ತಿಯಿಂದ ಆಚರಿಸಿ ಶ್ರೀ ಮಲ್ಲಿಕಾರ್ಜುನನ ಕೃಪೆಗೆ ಪಾತ್ರರಾದರು. ಈ ಮಹಾರಥೋತ್ಸವದ 5 ದಿನ ಮೊದಲಿನಿಂದ ಹುಚ್ಚಯ್ಯ ರಥೋತ್ಸವವನ್ನು ಭಕ್ತಸಮೂಹದ, ಸುಮಂಗಲೆಯರ ಆರತಿ ಹಾಗೂ ವಿವಿಧ ಮಜಲುಗಳ ಜೊತೆಗೆ ಜರುಗುತ್ತದೆ. ಬಳಿಕ ಭಕ್ತರ ಸ್ವ–ಇಚ್ಛೆಯಿಂದ ಪ್ರಸಾದ (ಅನ್ನಸಂತರ್ಪಣೆ) ಸೇವೆ ಕಾರ್ಯ ನಡೆದುಕೊಂಡು ಬರುತ್ತಿದೆ.





ಕ್ಷೇತ್ರಾಧಿಪತಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಪಕ್ಷಿನೋಟ :

ಉತ್ತರಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಮುಳುಗಡೆಯಾದ ಮಲ್ಲಾಪೂರ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಕಣ್ಮನ ಸೆಳೆಯುವಂತಹ ಬಲು ಸುಂದರವಾದ ಕೆಂಪು ಕಲ್ಲಿನ ದೇವಾಲಯವಾಗಿದ್ದು ವಿಶಾಲವಾದ ಪ್ರದೇಶದಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯದ ಮುಂಭಾಗದ ಕಲ್ಲಿನ ಮೆಟ್ಟಿಲುಗಳು ಹಾಗೂ ದೇವಾಲಯದ ಹೆಬ್ಬಾಗಿಲು ನೋಡಿದರೆ ಈ ಭಗವಂತನೇ ಭೂಮಿಗಳಿದು ನೆಲೆನಿಂತ ಕೈಲಾಸದಂತೆ ಭಾಸವಾಗುತ್ತದೆ. ಈ ದೇವಸ್ಥಾನವನ್ನು ಈ ಭಾಗದ ಭಕ್ತ ಸಮೂಹದ ಪಾಲಿಗೆ ಸುಕ್ಷೇತ್ರ ಶ್ರೀಶೈಲದ ಶ್ರೀ ಮಲ್ಲಿಕಾರ್ಜುನನೆಂದೇ ಜಗಜನಿತವಾಗಿದೆ.

ಹೊಸ ಮಲ್ಲಾಪೂರ ಗ್ರಾಮವು ಈದೀಗ ಬಾಗಲಕೋಟ–ಇಲಕಲ್ಲ ಹೆದ್ದಾರಿಯಲ್ಲಿ ಬಾಗಲಕೋಟೆನಗರದಿಂದ 8 ಕಿಲೋ ಮೀಟರ ದೂರದಸಂಗಮ್‌ಕ್ರಾಸಸಮೀಪಬೇವಿನಮಟ್ಟಿ ಪುನರ್ವಸತಿ ಕೇಂದ್ರದಲ್ಲಿ ಹೊಸ ಮಲ್ಲಾಪೂರ ಗ್ರಾಮವು ಮುಳುಗಡೆ ಸಂತ್ರಸ್ಥರ ತಾಣವಾಗಿದೆ. ಹಳೆ ಮಲ್ಲಾಪೂರ ಗ್ರಾಮ ಕೃಷ್ಣಾನದಿಗೆ ಆಲಮಟ್ಟಿಯಲ್ಲಿ ಕಟ್ಟಿದ ಶ್ರೀ ಲಾಲಬಹಾದ್ದೂರ ಶಾಸ್ತ್ರಿ ಆಣೆಕಟ್ಟಿನ ಹಿನ್ನೀರಿನಿಂದಾಗಿ ಸಂಪೂರ್ಣವಾಗಿ ಮುಳುಗಡೆಯಾಗಿದ್ದರೂ ಕೂಡ ಈ ದೇವಸ್ಥಾನದ ಜೊತೆಗಿನ ಮಲ್ಲಾಪೂರ ಗ್ರಾಮದ ಭಕ್ತರ ಅವಿನಾಭಾವ ಭಾವನಾತ್ಮಕ ಸಂಬಂಧದಿಂದಾಗಿ ಹಾಗೂ ಅಪಾರ ಭಕ್ತ ಸಮೂಹದ ಸಹಕಾರದಿಂದ ಪ್ರತಿ ವರ್ಷವೂ ಕೂಡಾ ಶ್ರಾವಣ ಮಾಸದ ಕೊನೆಯ ಸೋಮವಾರ ಜಾತ್ರೆಯನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾ ಬರುತ್ತಿದ್ದಾರೆ.

ನಿತ್ಯ ಶ್ರೀ ಮಲ್ಲಿಕಾರ್ಜುನ ದೇವರಿಗೆ ಅಭಿಷೇಕ ನಡೆಯುತ್ತಿದ್ದು. ಪ್ರತಿ ಅಮವಾಸ್ಯೆಯಂದು ದರ್ಶನಕ್ಕೆಂದು ಬರುವ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಇರುತ್ತದೆ. ದವನದ ಹುಣ್ಣಿಮೆಯ ಮಹಾರಥೋತ್ಸವಕ್ಕೆ ಅಕ್ಕ–ಪಕ್ಕದ ಗ್ರಾಮಗಳಾದ ನೀರಲಕೇರಿ ಭಕ್ತರಿಂದ ತೇರಿನ ಕಳಸದ ಸೇವೆ, ತೇರು ಎಳೆಯಲು ಹೊನ್ನಾಕಟ್ಟಿ ಗ್ರಾಮದ ಭಕ್ತಾದಿಗಳಿಂದ ತೇರಿನ ಹಗ್ಗ ಸಮರ್ಪಿಸುವ ಸೇವೆ. ಹಾಗೆಯೇ ಕಿರಸೂರ ಗ್ರಾಮದ ಭಕ್ತಾದಿಗಳಿಂದ ನಂದಿಕೋಲಿನ ಸೇವೆ. ಹೀಗೆ ವಿವಿಧ ಸೇವಾ ಕೈಂಕರ್ಯಗಳನ್ನು ಸುತ್ತ ಹಳ್ಳಿಗಳ ಭಕ್ತಾದಿಗಳು ಹಂಚಿಕೊಂಡು ಸ್ವ–ಇಚ್ಛೆಯಿಂದ ಭಕ್ತಿಸೇವೆಗೈಯುವುದನ್ನು ನೋಡಿದರೆ ಸುತ್ತಲಿನ ಹತ್ತು ಹಳ್ಳಿಗಳಿಗೆ ಧಾರ್ಮಿಕ ಭಾವೈಕ್ಯತೆಯನ್ನು ಬೆಸೆಯುವಂತೆ ಈ ಜಾತ್ರೆ ನೇರವೇರುತ್ತಿರುವುದು ನಿಜಕ್ಕೂ ಶ್ಲಾಘನೀಯ.

ಪ್ರಥಮ ಮಹಾರಥೋತ್ಸವವು ಹುಟಗಿ–ಸೊಲ್ಲಾಪೂರ ಬೃಹನ್ಮಠದ ಪರಮಪೂಜ್ಯ ಯೋಗೀರಾಜೇಂದ್ರ ಮಹಾಸ್ವಾಮಿಗಳು, ಚರಂತಿಮಠದ ಪರಮಪೂಜ್ಯ ಶ್ರೀ ಮ.ನಿ.ಪ್ರ ಪ್ರಭುಸ್ವಾಮಿಗಳು ಹಾಗೂ ಟೀಕಿನಮಠದ ಪರಮ ಪೂಜ್ಯ ಲಿಂಗೈಕ್ಯ ಶ್ರೀಮ.ನಿ.ಪ್ರ ರೇವಣಸಿದ್ಧ ಮಹಾಸ್ವಾಮಿಗಳು, ಮಲ್ಲಾಪೂರದ ದುರದುಂಡೇಶ್ವರ ಮಠದ ಪರಮಪೂಜ್ಯ ಲಿಂಗೈಕ್ಯ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು ಹಾಗೂ ಇನ್ನೂ ಅನೇಕ ಹರಗುರುಚರಮೂರ್ತಿಗಳ ಸಮ್ಮುಖದಲ್ಲಿ ನೇರವೇರಿದ್ದು ಇಂದಿಗೂ ಈ ಸತ್‌ಸಂಪ್ರದಾಯ ಮುಂದುವರೆದುಕೊಂಡು ಬರುತ್ತಿದೆ. ಅಪಾರ ಭಕ್ತ ಸಮೂಹ ಈ ಮಹಾರಥೋತ್ಸವದಲ್ಲಿ ಪಾಲ್ಗೊಂಡು ಶ್ರೀ ಮಲ್ಲಿಕಾರ್ಜುನ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಪ್ರತಿ ವರ್ಷ ಈ ಮಹಾರಥೋತ್ಸವದ ನಂತರ ರಾತ್ರಿ 10ಘಂಟೆಗೆ ಗ್ರಾಮದ ತರುಣರಿಂದ ಮನರಂಜನಾ ಕಾರ್ಯಕ್ರಮಗಳು ನೆಡೆಯುತ್ತಾ ಬರುತ್ತಿವೆ. ಮರುದಿನ ನಡೆಯುವ ಕುಸ್ತಿ ಪಂದ್ಯಾವಳಿಗಳಲ್ಲಿ ವಿವಿಧ ಭಾಗಗಳಿಂದ ಬರುವ ಕುಸ್ತಿ ಪಟುಗಳನ್ನು ನೋಡಿ ಅವರು ಆಡುವ ಕುಸ್ತಿಗೆ ಹರ್ಷ ವ್ಯಕ್ತಪಡಿಸಿ ಸೂಕ್ತ ಬಹುಮಾನ ನೀಡಿ ಗೌರವಿಸುವ ಮೂಲಕ ಗ್ರಾಮೀಣಕ್ರೀಡೆಗಳನ್ನುಪ್ರೋತ್ಸಾಹಿಸಿಬೆಳೆಸಲು ವೇದಿಕೆಯಾಗಿತ್ತು.

ಪ್ರತಿವರ್ಷ ಈ ಗ್ರಾಮದ ಪ್ರಸಿದ್ಧ ಭಜನಾ ಪದಗಳನ್ನು ಕಟ್ಟಿ ಹಾಡುವ "ಅಚ್ಚ ಮಲ್ಲಿಗೆ ಹೂವಾ" ಭಜನಾ ಪದ ಖ್ಯಾತಿಯ ಶ್ರೀಯುತ





ಮಲ್ಲಯ್ಯ ಕುಂದರಗಿಮಠ ಇವರು ಭಜನಾ ಪದಗಳ ಕ್ಯಾಸೆಟ್‌ಗಳಿಂದ ಶ್ರೀಶೈಲ ಕ್ಷೇತ್ರದಲ್ಲಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಅವರ ನೇತೃತ್ವದಲ್ಲಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಹಾಗೂ ಬಾಗಲಕೋಟೆಯ ಸದ್ಭಕ್ತರು ಪ್ರತಿವರ್ಷ ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆ ಮೂಲಕ ಮಲ್ಲಯ್ಯನ ಕಂಬಿಗಳ ಜೊತೆಗೆ ಹೋಗುವುದರಿಂದ ಗ್ರಾಮದಲ್ಲಿ ಭಕ್ತಿಭಾವವನ್ನು ಹುಟ್ಟುಹಾಕಿದ್ದಾರೆ.

ಇನ್ನೂ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಶ್ರೀ ಮಲ್ಲಿಕಾರ್ಜುನನಿಗೆ ಪ್ರತಿ ಸೋಮವಾರ ಮುಂಜಾನೆ ರುದ್ರಾಭಿಷೇಕ ನೆಡೆಯುತ್ತಿದ್ದು ಕೊನೆಯ ಸೋಮವಾರ ಜಾತ್ರೆ ನೆರೆವೇರುತ್ತದೆ. ಆ ದಿವಸ ಮಲ್ಲಾಪೂರದಿಂದ ಪಾದಯಾತ್ರೆ ಮೂಲಕ ಕಳಸದ ಮೆರವಣಿಗೆಯೊಂದಿಗೆ ದೇವಸ್ಥಾನದವರೆಗೆ ತಲುಪಿ ನಂತರ ಶಿಖರಕ್ಕೆ ಕಳಸಾರೋಹಣ ಮಾಡುವರು. ಆ ದಿವಸ ಶ್ರೀಶೈಲ ಮಲ್ಲಿಕಾರ್ಜುನನ ಪ್ರತಿರೂಪವಾದ ಈ ಮಲ್ಲಾಪೂರದ ಶ್ರೀ ಮಲ್ಲಿಕಾರ್ಜುನ ದೇವರ ದಿವ್ಯದರ್ಶನ ಪಡೆದು ಇಷ್ಟಾರ್ಥಗಳ ಸಿದ್ಧಿಗೆ ಪ್ರಾರ್ಥಿಸಿ ಸೇವಾಕೈಂಕರ್ಯರ್ಗಳಲ್ಲಿ ತೊಡಗಿಕೊಳ್ಳುವರು. ಈ ದೇವಸ್ಥಾನದ ಇನ್ನೊಂದು ವಿಶೇಷತೆಯೆಂದರೆ ಶ್ರೀ ಮಲ್ಲಿಕಾರ್ಜುನನ ದೇವಸ್ಥಾನದ ಕೆಳಗೆ ಶ್ರೀ ಸಂಗಮನಾಥನ ದೇವಾಲಯವಿರುವುದರಿಂದ ಕೂಡಲಸಂಗಮದ ಆ ಸಂಗಮನಾಥನ ಪ್ರತಿರೂಪದ ದಿವ್ಯದರ್ಶನವೂ ಇಲ್ಲಿಯೇ ಲಭಿಸುವುದರಿಂದ ಇದು ನಿಜಕ್ಕೂ ಪುಣ್ಯ ಪವಿತ್ರ ಸುಕ್ಷೇತ್ರ ಎಂಬುದೇ ಭಕ್ತರ ಬಲವಾದ ನಂಬಿಕೆ. ಜೋಡಿ ಕಳಸದ ಮೆರವಣಿಗೆ ಎಂದರೆ ಶ್ರೀ ಮಲ್ಲಿಕಾರ್ಜುನನ ಹಾಗೂ ಶ್ರೀ ಸಂಗಮನಾಥನ ಶಿಖರಗಳ ಕಳಸಗಳ ಮೆರವಣಿಗೆ ಆಗಿರುವದರಿಂದ ಇದು ನಿಜಕ್ಕೂ ವಿಶೇಷ. ಶ್ರಾವಣ ಮಾಸದ ಕೊನೆಯ ಸೋಮವಾರ ಈ ಜೋಡಿ ಕಳಸಗಳನ್ನು ಭಕ್ತರು ಪಾದಯಾತ್ರೆಯೊಂದಿಗೆ ಭಜನಾ ಸಮೂಹ ಹಾಗೂ ಸಕಲ ವಾದ್ಯಗಳೊಂದಿಗೆ ಅತೀ ವಿಜೃಂಭನೆಯಿಂದ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತಂದು ಜಾತ್ರೆಯನ್ನು ಮಾಡುವರು. ಭಕ್ತರು ತನು–ಮನ–ಧನಗಳಿಂದ ಭಕ್ತಸೇವೆ ಸಲ್ಲಿಸಿ ಪುನೀತರಾಗುತ್ತಾರೆ. ಮಲ್ಲಾಪೂರದ ಆದಿದೈವನಾದ ಶ್ರೀ ಮಲ್ಲಿಕಾರ್ಜುನನು ಈ ಭಾಗದ ಭಕ್ತವೃಂದದ ಹೃದಯಮಂದಿರಗಳಲ್ಲಿ ಅಚ್ಚಳಿಯದೇ ನೆಲೆಸಿದ್ದಾನೆ.


ಇನ್ನು ವಿವಾಹ ಕಾರ್ಯಗಳಿಗಾಗಿ ಹೇಳಿ ಮಾಡಿಸಿದಂತಿರುವ ಈ ತಾಣದಲ್ಲಿ ನಿಸರ್ಗ ರಮಣೀಯತೆ ಒಂದಡೆಯಾದರೆ ಸಕಲ ಸೌಲಭ್ಯಗಳಿಂದ ಕೂಡಿದ್ದು ವಿಫುಲ ನೀರಿನ ಸೌಲಭ್ಯ, ತಂಪಾದ ಗಿಡಮರಗಳು, ವಿಶಾಲವಾದ ಮೈದಾನ, ನದಿತಟಗಳು ಶ್ರೀಮಲ್ಲಿಕಾರ್ಜುನ, ಹಾಗೂ ಶ್ರೀ ಸಂಗಮನಾಥರು ನೆಲೆಸಿದ ಪವಿತ್ರ ಸ್ಥಳ ಇದಾಗಿರುವದರಿಂದ ಭಕ್ತರಿಗೆ ಭಾರವಾಗದಿರಲೆಂದು ಅತೀ ಕಡಿಮೆ ವೆಚ್ಚದಲ್ಲಿ ಈ ಎಲ್ಲ ಸೌಲಭ್ಯಗಳನ್ನೂ ನೀಡುತ್ತಿರುವುದು ಬಡವರ ಪಾಲಿನ ಭಾಗ್ಯವೇ ಸರಿ.

ಒಟ್ಟಿನಲ್ಲಿ ಪ್ರತಿವರ್ಷ 2ಸಲ ಅಂದರೆ ದವಣದ ಹುಣ್ಣಿಮೆಯೆಂದುಮಹಾರಥೋತ್ಸವಹಾಗೂ ಶ್ರಾವಣದ ಕೊನೆಯ ಸೋಮವಾರ ಕಳಸದ ಮೆರವಣಿಗೆ ಹೀಗೆ ಎರಡು ಜಾತ್ರೆಗಳನ್ನು ಅತ್ಯಂತ ವಿಜೃಂಭನೆಯಿಂದ ಆಚರಿಸುತ್ತಾ. ಶ್ರೀ ಮಲ್ಲಿಕಾರ್ಜುನನ ಕೃಪೆಗೆ ಪಾತ್ರರಾಗಿ ಈ ಭಾಗದ ಭಕ್ತರು ಪುನೀತರಾಗುತ್ತಿದ್ದಾರೆ.



ಲೇಖನ :
ಶ್ರೀ ಆರ್. ಎಮ್. ಗೌಡರ
ಉಪನ್ಯಾಸಕರು
ಶ್ರೀ ಹುಚ್ಚೇಶ್ವರ ಪದವಿಪೂರ್ವ ಕಾಲೇಜ
ಕಮತಗಿ, ಸಾ॥ ಮಲ್ಲಾಪೂರ ಪು.ಕೇ
ತಾ॥ ಜಿ॥ ಬಾಗಲಕೋಟೆ

# ದಿಂಗಾಲೇಶ್ವರರು ರಾಜಕೀಯ ಪ್ರವೇಶಿಸಿದ ಸಮಯ, ಜಾಗ ಸರಿಯಿಲ್ಲ: ಗುಣಧರನಂದಿ ಮಹಾರಾಜ



**ಹುಬ್ಬಳ್ಳಿ :** 'ಫಕೀರ ದಿಂಗಾಲೇಶ್ವರ ಸ್ವಾಮೀಜಿ ರಾಜಕೀಯ ಪ್ರವೇಶ ಮಾಡಿದ ಸಮಯ ಮತ್ತು ಜಾಗ ಸರಿಯಿಲ್ಲ. ಇದು ಶಿರಹಟ್ಟಿಯ ಫಕೀರೇಶ್ವರ ಮಹಾಸಂಸ್ಥಾನದ ಅಸ್ತಿತ್ವದ ಪ್ರಶ್ನೆಯಾಗಿದೆ' ಎಂದು ವರೂರು ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜರು ಅಭಿಪ್ರಾಯಪಟ್ಟರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ದಿಂಗಾಲೇಶ್ವರ ಸ್ವಾಮೀಜಿ ನನ್ನನ್ನು ಸಂಪರ್ಕಿಸಿ, ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ತಿಳಿಸಿದ್ದರು. ರಾಜಕೀಯ ಪ್ರವೇಶಿಸಲು ಸಮಯ ಸರಿಯಿಲ್ಲ. ಧಾರವಾಡ ದೊಡ್ಡ ಲೋಕಸಭಾ ಕ್ಷೇತ್ರವಾಗಿದ್ದು, 546 ಹಳ್ಳಿಗಳನ್ನು ಒಳಗೊಂಡಿದೆ. ಅಲ್ಪ ಸಮಯದಲ್ಲಿ ಹಳ್ಳಿಗಳನ್ನು ಸಂಪರ್ಕಿಸಲು ಅಸಾಧ್ಯ. ಇದು ಅವರಿಗೆ ಕಷ್ಟವಾಗಿ, ಚುನಾವಣೆಯಲ್ಲಿ ಸೋತರೆ ಮಠದ ಗೌರವಕ್ಕೆ ಧಕ್ಕೆಯಾಗಲಿದೆ' ಎಂದು ಹೇಳಿದರು.

'ದಿಂಗಾಲೇಶ್ವರ ಸ್ವಾಮೀಜಿ ದೊಡ್ಡ ಧರ್ಮಗುರುಗಳು. ವೈಯಕ್ತಿಕ ಸಮಸ್ಯೆಗಳು ಹಾಗೂ ಅವರ ಸಮಾಜಕ್ಕೆ ಅನ್ಯಾಯವಾಗಿದ್ದರೆ ಅದನ್ನು ಹಿರಿಯರ ಜೊತೆ ಕೂತು ಬಗೆಹರಿಸಿಕೊಳ್ಳಬೇಕು. ಯಾವುದೇ ಸಮಾಜಕ್ಕೆ ಅನ್ಯಾಯವಾಗಬಾರದು' ಎಂದು ಹೇಳಿದರು.

'ಯಾವ ಪಕ್ಷಕ್ಕೆ ಬೆಂಬಲ ನೀಡುತ್ತೀರಿ' ಎನ್ನುವ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗುಣಧರನಂದಿ, 'ಭಾರತ ಸದೃಢವಾಗಬೇಕು. ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಪಕ್ಷಕ್ಕೆ ಬೆಂಬಲ ನೀಡುತ್ತೇವೆ' ಎಂದರು.

# ಹುಬ್ಬಳ್ಳಿ: ಚಿನ್ನಾಭರಣವಿದ್ದ ಬ್ಯಾಗ್ ಮರಳಿಸಿದ ಆಟೊ ಚಾಲಕ



**ಹುಬ್ಬಳ್ಳಿ :** ಬಸ್ ಹತ್ತುವ ಧಾವಂತದಲ್ಲಿ ಆಟೊದಲ್ಲಿ ಬಿಟ್ಟು ಹೋಗಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ, ನಗದು ಇದ್ದ ಬ್ಯಾಗ್ ಅನ್ನು ಆಟೊ ಚಾಲಕರು ಮತ್ತು ಗೋಕುಲ ರಸ್ತೆ ಠಾಣೆ ಪೊಲೀಸರು ಪ್ರಯಾಣಿಕರಿಗೆ ಮರಳಿ ಕೊಡಿಸಿದ್ದಾರೆ.

ಧಾರವಾಡದ ನಿಜಾಮುದ್ದೀನ್ ಕಾಲೊನಿ ಮಹಿಳೆ ಮಂಗಳವಾರ ಮಧ್ಯಾಹ್ನ ನಗರದ ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣದಿಂದ ಹೊಸೂರಿನ ಬಸ್ ನಿಲ್ದಾಣಕ್ಕೆ ಆಟೊದಲ್ಲಿ ಪ್ರಯಾಣಿಸಿದ್ದರು. ಬಸ್ ಹತ್ತುವ ಆತುರದಲ್ಲಿ ಹಣ ಮತ್ತು ಚಿನ್ನಾಭರಣ ಇದ್ದ ಬ್ಯಾಗ್ ಅನ್ನು ಆಟೊದಲ್ಲಿ ಮರೆತಿದ್ದರು. ನಂತರ ಬ್ಯಾಗ್ ಇಲ್ಲದಿರುವುದು ಗಮನಕ್ಕೆ ಬಂದಿದ್ದು, ತಕ್ಷಣ ಗೋಕುಲ ರಸ್ತೆ ಪೋಲಿಸ್ ಠಾಣೆಗೆ ತೆರಳಿ ಮಾಹಿತಿ ನೀಡಿದ್ದರು.

ಇನ್‌ಸ್ಪೆಕ್ಟರ್ ಪ್ರವೀಣ ನೀಲಮ್ಮನವರ ಮಾರ್ಗದರ್ಶನದಲ್ಲಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು. ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ, ನಾಗರಾಜ ಮೇಗುಂಡಿ ಅವರ ಆಟೊದಲ್ಲಿ ಮಹಿಳೆ ಪ್ರಯಾಣಿಸಿರುವುದು ಗಮನಕ್ಕೆ ಬಂದಿತ್ತು. ಆಟೊ ಚಾಲಕರ ಸಂಘದ ಅಧ್ಯಕ್ಷ ಶೇಖರಯ್ಯ ಮಠಪತಿ ಅವರಿಗೆ ಪೊಲೀಸರು ವಿಷಯ ತಿಳಿಸಿದ್ದರು. ಮಂಗಳವಾರ ಆಟೊ ಚಾಲಕ ನಾಗರಾಜ ಅವರು, ಠಾಣೆಗೆ ಬ್ಯಾಗ್ ತಂದು ಪೊಲೀಸರ ಸಮ್ಮುಖದಲ್ಲಿ ವಾರಸ್ದಾರರಿಗೆ ಹಸ್ತಾಂತರಿಸಿದ್ದಾರೆ.

40 ಗ್ರಾಂ ಚಿನ್ನಾಭರಣ, 200 ಗ್ರಾಂ ಬೆಳ್ಳಿ, ?10 ಸಾವಿರ ನಗದು ಸೇರಿದಂತೆ ಕೆಲವು ದಾಖಲೆ ಪತ್ರಗಳು ಬ್ಯಾಗ್‌ನಲ್ಲಿ ಇದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

# ಮತದಾನ ಸಂವಿಧಾನಾತ್ಮಕ ಹಕ್ಕು: ಅನೂಪಕುಮಾರ



**ವಿಜಯಪುರ :** ದೇಶದ ಉನ್ನತಿ ಹಾಗೂ ಏಳಿಗೆ ಎಂಬುದು ದೇಶದ ಪ್ರಜೆಗಳ ಅಭಿಪ್ರಾಯದ ಮೇಲೆ ನಿಂತಿರುತ್ತದೆ. ಅಂತಹ ಆಯ್ಕೆಯ ಹಕ್ಕು ಚುನಾವಣೆ ನೀಡುತ್ತದೆ. ಸಮಯೋಚಿತವಾಗಿ ಸೂಕ್ತ ಅಭ್ಯರ್ಥಿಗೆ ಮತ ನೀಡುವುದರಿಂದ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗುತ್ತದೆ. ಈ ಕಾರಣಕ್ಕಾಗಿ ಸಂವಿಧಾನ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಮತದಾನದ ಹಕ್ಕು ನೀಡಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಐ.ಆರ್.ಎಸ್ ಅಧಿಕಾರಿ ಅನೂಪಕುಮಾರ ಹೇಳಿದರು.

ಲೆ??ಕಸಭಾ ಚುನಾವಣಾ ಹಿನ್ನೆಲೆಯಲ್ಲಿ ನಿಡಗುಂದಿ ತಾಲೂಕಿನ ಆಲಮಟ್ಟಿ ಉದ್ಯಾನ ಸಂಗೀತ ಕಾರಂಜಿ ಹಾಗೂ ಲೇಸರ್ ಪ್ರದರ್ಶನ ಆವರಣದಲ್ಲಿ ಭಾನುವಾರ ಸಂಜೆ ಹಮ್ಮಿಕೊಂಡ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯಾವುದೇ ಆಮಿಷಕ್ಕೆ ಬಲಿಯಾಗದೆ ಸೂಕ್ತ ರೀತಿ ಯೋಚನೆಯಿಂದ ಮತ ಚಲಾಯಿಸಿ ಸುಭದ್ರ ದೇಶ ನಿರ್ಮಾಣ ಮಾಡಲು ಸಹಕರಿಸಬೇಕು ಎಂದು ಹೇಳಿದರು.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರು ಮಾತನಾಡಿ, ಮೇ 7 ರಂದು ನಡೆಯುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಜಿಲ್ಲೆಯಲ್ಲಿ ಮತದಾನ ಮಾಡಲು ಚುನಾವಣೆ ಆಯೋಗದಿಂದ ಸಕಲ ವ್ಯವಸ್ಥೆ ಮಾಡಿದೆ. ಅದನ್ನು ಸಾರ್ವಜನಿಕರು ಸದುಪಯೋಗ ಮಾಡಿಕೊಂಡು ಪ್ರಜಾಪ್ರಭುತ್ವದಲ್ಲಿ ತಮ್ಮ ಹಕ್ಕನ್ನು ಚಲಾಯಿಸಬೇಕು ಎಂದು ಮನವಿ ಮಾಡಿದರು.

ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಮಾತನಾಡಿ, ಜಿಲ್ಲೆಯಲ್ಲಿ ಪ್ರತಿಯೊಬ್ಬ ಮತದಾರರೂ ತಮ್ಮ ಹಕ್ಕು ಚಲಾಯಿಸಲು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದು, ಶೇ.100 ರಷ್ಟು ಕಡ್ಡಾಯ ಮತದಾನ ಮಾಡುವ ಮೂಲಕ ಮತದಾರರು ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

**ಗಮನ ಸೆಳೆದ ಸಂಗೀತ ಕಾರಂಜಿ ಪ್ರದರ್ಶನ:**
ಸಂಗೀತ ಕಾರಂಜಿಯಲ್ಲಿ ಚುನಾವಣಾ ಪರ್ವ ದೇಶದ ಗರ್ವ ಘೋಷಣೆ ಅಡಿ ನಾ ಭಾರತ?ಭಾರತ ನನ್ನಲ್ಲಿ? ನಾ ಜಾಗೃತ.. ಜಾಗೃತಿ ನನ್ನಲ್ಲಿ.. ಮತದಾನ ಮಹತ್ವ ಸಾರುವ, ಮತದಾನ ಜಾಗೃತಿ ಮೂಡಿಸುವ, ಸುಂದರ ಚುನಾವಣಾ ಗೀತೆಗಳು ಗಮನ ಸೆಳೆದವು. ಅದಕ್ಕೆ ತಕ್ಕ ಹಾಗೆ ನೀರಿನ ಕಾರಂಜಿಗಳ ಏರಿಳಿತ ಜನರ ಮನ ಸೂರಗೊಂಡವು.

ಮತ ಚುಲಾವಣೆ ನಿಮ್ಮ ಹಕ್ಕು ತಪ್ಪದೇ ನಿಮ್ಮ ಮತ ಚಲಾಯಿಸಿ,ನನ್ನ ಮತ ನನ್ನ ಹಕ್ಕು, ನಿಮ್ಮ ಮತ ನಿಮ್ಮ ಭವಿಷ್ಯ, ಆಮಿಷಕ್ಕೆ ಮರುಳಾಗದಿರಿ; ಯೋಚಿಸಿ ಮತ ಚಲಾಯಿಸಿ ಎಂದು ಬರೆದಿರುವ ನಾಮಫಲಕಗಳನ್ನು ಪ್ರದರ್ಶಿಸಲಾಯಿತು.

ಮೊಬೈಲ್ ಟಾರ್ಚ್ ಲೈಟ್, ಮೇಣದ ದೀಪಗಳು ಹಚ್ಚುವ ಮೂಲಕ ವಿಶೇಷ ರೀತಿಯಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು. ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ತಾಲೂಕಾಡಳಿತ, ತಾಲೂಕು ಸ್ವೀಪ್ ಸಮಿತಿಯ ಈ ಪ್ರಯತ್ನ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿ?ಾ?ಠಧಿಕಾರಿ ಋಷಿಕೇಶ ಸೋನಾವಣೆ, ಉಪಕಾರ್ಯದರ್ಶಿ ಬಿ.ಎಸ್.ಮುಗನೂರಮಠ, ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಸಿ.ಆರ್.ಮುಂಡರಗಿ, ಸಹಾಯಕ ಚುನಾವಣಾಧಿಕಾರಿ ಗಂಗಪ್ಪ, ಚುನಾವಣಾ

ರಾಯಭಾರಿ ರಾಜಶೇಖರ ಪವಾರ, ಜಿಲ್ಲಾ ಪಂಚಾಯತಿಯ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಎ.ಬಿ.ಅಲ್ಲಾಪುರ, ನಿಡಗುಂದಿ ತಾಪಂ ಇಒ ವ್ಹಿ.ಎಸ್.ಹಿರೇಮಠ, ಬಸವನ ಬಾಗೇವಾಡಿ ತಾಪಂ ಇಒ ಪ್ರಕಾಶ ದೇಸಾಯಿ, ಸಹಾಯಕ ನಿರ್ದೇಶಕ ವೆಂಕಟೇಶ ವಂದಾಲ, ತಾಪಂ ಸಹಾಯಕ ಲೆಕ್ಕಾಧಿಕಾರಿ ಬಿ.ಎಂ.ಅಂಕದ, ಆಲಮಟ್ಟಿ ಗ್ರಾಪಂ ಪಿಡಿಒ ಎಚ್.ಆರ್.ವಡ್ಡರ, ನಿಡಗುಂದಿ, ಬಸವನ ಬಾಗೇವಾಡಿ, ಕೊಲ್ಹಾರ ತಹಸೀಲ್ದಾರರು, ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಪಾರ್ಟ್‌ಮೆಂಟ್‌ನಲ್ಲಿ ಸಿಕ್ಕ ಕೋಟಿ ಕೋಟಿ ಹಣ ಬ್ಯಾಂಕ್‌ಗೆ ಜಮೆ ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ ಬಿಜೆಪಿ–ಕಾಂಗ್ರೆಸ್



**ಧಾರವಾಡ :** ಮದ್ಯ ಶೋಧನೆಗೆ ಹೋದವರಿಗೆ ಧಾರವಾಡದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಸಿಕ್ಕ ಕೋಟಿ ಕೋಟಿ ಹಣದ ಎಣಿಕೆ ಕಾರ್ಯ ಮುಗಿದಿದ್ದು, ಅದನ್ನು ಹುಬ್ಬಳ್ಳಿಯ ಕೇಶ್ವಾಪೂರ ಎಸ್‌ಬಿಐ ಬ್ಯಾಂಕ್‌ನಲ್ಲಿ ಅಧಿಕಾರಿಗಳು ಜಮೆ ಮಾಡಿದ್ದಾರೆ.

ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಗಿನ ಜಾವದ ವರೆಗೂ ಹಣದ ಎಣಿಕೆ ಮಾಡಿದ ಹಣವನ್ನು ಅಧಿಕಾರಿಗಳು 18 ಕ್ಕೂ ಅಧಿಕ ಬ್ಯಾಗುಗಳಲ್ಲಿ ತುಂಬಿಕೊಂಡು ಇನ್ನೊವಾ ಕಾರಿನಲ್ಲಿಟ್ಟುಕೊಂಡು ಹುಬ್ಬಳ್ಳಿಗೆ ಕೊಂಡೊಯ್ದರು. ಆದರೆ ಈ ಹಣದ ಕುರಿತು ಧಾರವಾಡದ ಜಿಲ್ಲಾಧಿಕಾರಿಗಳು ಸೇರಿದಂತೆ ಯಾವುದೇ ಅಧಿಕಾರಿಗಳು ಮಾಹಿತಿ ನೀಡುತ್ತಿಲ್ಲ.

ಸದ್ಯಕ್ಕೆ ಅರ್ನಾ ಅಪಾರ್ಟ್‌ಮೆಂಟ್‌ನ 33 ನೇ ಫ್ಲಾಟ್ ಸಹಾಯಕ ಬಸವರಾಜ ದತ್ತುನವರ ಅವರಿಗೆ ಸೇರಿದ್ದರಿಂದ ಐಟಿ ಅಧಿಕಾರಿಗಳು ಹಣದ ಮೂಲ ಪತ್ತೆಗೆ ಬಲೆ ಬೀಸಿದ್ದಾರೆ. ಕೋಟಿ ಕೋಟಿ ಹಣ18–20 ಕೋಟಿ ರೂ.ಗಳಿಗೂ ಅಧಿಕ ಮೊತ್ತದ್ದಾಗಿದೆ ಎನ್ನಲಾಗಿದೆ. ಆದರೆ ಈ ಪೈಕಿ ಒಂದಿಷ್ಟು ಹಣಕ್ಕೆ ಈಗಾಗಲೇ ದಾಖಲೆಗಳನ್ನು ನೀಡಲಾಗಿದೆ ಎನ್ನುವ ಮಾಹಿತಿ ಇದ್ದು, ಅಂತಿಮವಾಗಿ ಎರಡು ದಿನಗಳ ನಂತರವೇ ಅಧಿಕೃತವಾಗಿ ಇದು ಯಾರಿಗೆ ಸೇರಿದ ಹಣ ಎಂಬುದು ಗೊತ್ತಾಗಲಿದೆ.

ಬಸವರಾಜ ದತ್ತುನವರ ತಾನು ಯು.ಬಿ.ಶೆಟ್ಟಿ ಅವರ ಅಕೌಂಟೆಂಟ್ ಎಂದು ಹೇಳಿಕೊಂಡಿದ್ದರಿಂದ ಐಟಿ ಅಧಿಕಾರಿಗಳು ಶೆಟ್ಟಿ ಅವರ ಕಚೇರಿ ಮೇಲೂ ದಾಳಿ ಮಾಡಿ ಪರಿಶೀಲನೆ ನಡೆಸಿದ್ದರು.ಬುಧವಾರ ಮಧ್ಯಾಹ್ನ 2 ಗಂಟೆವರೆಗೂ ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿ ಎರಡು ಪೊಲೀಸ್ ಎಸ್ಕಾರ್ಟ ವಾಹನದ ಸಮೇತ ಭದ್ರತೆಯೊಂದಿಗೆ 18 ಕೋಟಿಗೂ ಅಧಿಕ ಹಣವನ್ನು 18 ಬ್ಯಾಗ್‌ಗಳಲ್ಲಿ ತುಂಬಿಕೊಂಡು ಹುಬ್ಬಳ್ಳಿಯ ಕೇಶ್ವಾಪುರದಲ್ಲಿರುವ ಎಸ್‌ಬಿಐ ಬ್ಯಾಂಕ್‌ಗೆ ರವಾನಿಸಿದ್ದಾರೆ.

**ಕೋಟಿ ಕೋಟಿ ಹಣ ರಾಜಕೀಯ :**
ಇನ್ನು ಜಿಲ್ಲೆಯಲ್ಲಿ ಮೊದಲೇ ಚುನಾವಣಾ ಕಾವು ಏರಿದ್ದರಿಂದ ರಾಜಕೀಯ ಪಕ್ಷಗಳ ಮುಖಂಡರು ಕೋಟಿ ಕೋಟಿ ಹಣವು ಈ ಪಕ್ಷದ್ದು ಆ ಪಕ್ಷದ್ದು ಎಂದು ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಧಾರವಾಡದಲ್ಲಿ ಸಿಕ್ಕಿರುವ ಹಣ ಕಾಂಗ್ರೆಸ್ ಮುಖಂಡರೊಬ್ಬರಿಗೆ ಸೇರಿದ್ದಿರಬಹುದು. ಇನ್ನೆರಡು ದಿನಗಳಲ್ಲಿ ಇವರ ಬಣ್ಣ ಬಯಲಾಗುತ್ತದೆ ಎಂದು ಆರೋಪಿಸಿದ್ದಾರೆ. ಅಷ್ಟೇಯಲ್ಲ, ಕೋಟಿ ಕೋಟಿ ಹಣ ಪಕ್ಕದ ಜಿಲ್ಲೆಯ ಪ್ರಭಾವಿ ರಾಜಕೀಯ ಮಹಿಳೆಯರೊಬ್ಬರಿಗೆ ಸೇರಿದ್ದಿರಬಹುದು ಎನ್ನುವ ಗುಸು ಗುಸು ಮಾತುಗಳು ಕೇಳಿ ಬರುತ್ತಿವೆ.

# ಯುಪಿಎಸ್ಸಿ: ಹುಬ್ಬಳ್ಳಿಯ ಕೃಪಾ ಜೈನ್‌ಗೆ 440ನೇ ರ್‍ಯಾಂಕ್



**ಹುಬ್ಬಳ್ಳಿ :** ಯುಪಿಎಸ್ಸಿಯಲ್ಲಿ 440ನೇ ರ್‍ಯಾಂಕ್ ಪಡೆಯುವ ಮೂಲಕ ಇಲ್ಲಿನ ರಾಜನಗರದ ನಿವಾಸಿ ಕೃಪಾ ಜೈನ್ ಜಿಲ್ಲೆಗೆ ಹೆಸರು ತಂದಿದ್ದಾರೆ.

ಇವರ ತಂದೆ ಅಭಯ ಪಾರ್ಲೆಚಾ ಇಲ್ಲಿನ ಎಪಿಎಂಸಿಯಲ್ಲಿ ದಿನಸಿ ಹೋಲ್‌ಸೇಲ್ ವ್ಯಾಪಾರಸ್ಥರಾಗಿದ್ದಾರೆ. ತಾಯಿ ಇಂದಿರಾ ಗೃಹಿಣಿ. ಮೂಲತಃ ಹೊಸಪೇಟೆಯವರು. ಬಹಳ ವರ್ಷಗಳ ಹಿಂದೆಯೇ ಹುಬ್ಬಳ್ಳಿಗೆ ಬಂದು ನೆಲೆಯೂರಿದ್ದಾರೆ. ಕೃಪಾ ಜೈನ್ ಹುಬ್ಬಳ್ಳಿಯಲ್ಲಿಯೇ ಜನಿಸಿದ್ದಾರೆ. ತಮ್ಮ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಡಿ.ಕೆ. ಪಬ್ಲಿಕ್ ಸ್ಕೂಲ್‌ನಲ್ಲಿ ಪೂರೈಸಿದ್ದಾರೆ. ಕೆಎಲ್‌ಇ ಸಂಸ್ಥೆಯ ಪ್ರೇರಣಾ ಕಾಲೇಜಿನಲ್ಲಿ 2016ರಲ್ಲಿ ಪಿಯುಸಿ (ವಿಜ್ಞಾನ) ಓದಿದ್ದಾರೆ. ಪಿಯುಸಿಯಲ್ಲಿ ಜಿಲ್ಲೆಗೆ ರ್‍ಯಾಂಕ್ ಪಡೆದಿದ್ದರು. ನಂತರ ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿ.ಇ. ಪೂರ್ಣಗೊಳಿಸಿ, ಸಿಸ್ಕೊ ನೆಟ್‌ವರ್ಕಿಂಗ್ ಕಂಪನಿಯಲ್ಲಿ ಕೆಲಸಮಯ ಕೆಲಸ ಮಾಡಿದರು.

ಐ.ಎ.ಎಸ್ ಮಾಡಲೇಬೇಕೆಂಬ ಸೆಳೆತ ಜೋರಾಗಿದ್ದರಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು, ದೆಹಲಿಗೆ ತೆರಳಿ ಅಧ್ಯಯನ ಮಾಡಿದರು. 2022ರಲ್ಲಿ ಯುಪಿಎಸ್ಸಿಯಲ್ಲಿ ರ್‍ಯಾಂಕ್ ಪಡೆದು, ಇಂಡಿಯನ್ ರೈಲ್ವೇಸ್ ಮ್ಯಾನೇಜ್‌ಮೆಂಟ್‌ನಲ್ಲಿ ಹುದ್ದೆಗಿಟ್ಟಿಸಿದ್ದರು. ಪುನಃ ಕಳೆದ ವರ್ಷ ಪರೀಕ್ಷೆ ಬರೆದು, 440ನೇ ರ್‍ಯಾಂಕ್ ಪಡೆದಿದ್ದಾರೆ.

**ಕಾಲೇಜಿನಲ್ಲಿ ಸೆಳೆತ:**
'ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿರುವಾಗ ರೋಟರ್‍ಯಾಕ್ಟ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ಬೇರೆ ಬೇರೆ ಸಮುದಾಯದವರ ಜೊತೆ ಬೆರೆಯುತ್ತಿದ್ದೆ. ಸಮುದಾಯ ಸೇವೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದೆ. ಜನಸೇವೆಗಾಗಿ ಏನಾದರೂ ಮಾಡಬೇಕು ಎಂದೆನಿಸಿ, ಐ.ಎ.ಎಸ್ ಕಡೆ ವಾಲಿದೆ' ಎಂದು ಕೃಪಾ ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿ.ಇ. ಮುಗಿಸಿದ ನಂತರ ಹುಬ್ಬಳ್ಳಿಯಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಯುಪಿಎಸ್ಸಿಗೆ ತಯಾರಿ ನಡೆಸಲು ಬೇಕಾದಂತಹ ವಾತಾವರಣ ಇರಲಿಲ್ಲ. ಅದಕ್ಕಾಗಿ, ದೆಹಲಿಗೆ ತೆರಳಿದೆ. ಅಲ್ಲಿ ವಿಷಯ ತಜ್ಞರ ಜೊತೆ ಸಮಾಲೋಚಿಸಿ, ಸ್ಟಡಿ ಸರ್ಕಲ್‌ನಲ್ಲಿ ಸೇರಿಕೊಂಡು ಅಧ್ಯಯನ ಮಾಡಿದೆ. ದಿನಕ್ಕೆ 10?12 ತಾಸು ಅಧ್ಯಯನ ಮಾಡುತ್ತಿದ್ದೆ. ಯಾವುದೇ ಕೋಚಿಂಗ್‌ಗೆ ಹೋಗಲಿಲ್ಲ. ಸ್ವ–ಅಧ್ಯಯನ ಮಾಡಿದೆ. ನನಗೆ ಐ.ಎ.ಎಸ್ ಮಾಡಬೇಕೆಂಬ ಆಸೆ ಇದೆ. ಈ ನನ್ನ ರ್‍ಯಾಂಕ್‌ಗೆ ಐ.ಎ.ಎಸ್ ಸಿಗದಿದ್ದರೆ ಮತ್ತೊಮ್ಮೆ ಪರೀಕ್ಷೆ ಬರೆಯುವೆ' ಎಂದು ಹೇಳಿದರು.

### ಮತದಾನ ಜಾಗೃತಿಗೆ ಜಿಲ್ಲಾ ಸ್ವೀಪ್ ಸಮಿತಿಯಿಂದ ವಿಶೇಷ ಕಾರ್ಯಕ್ರಮ | ಕೊಪ್ಪಳದಲ್ಲಿ ಗಮನ ಸೆಳೆದ ಕ್ಯಾಂಡಲ್ ಲೈಟ್ ಮೆರವಣಿಗೆ

# ಮತದಾನ ಮಾಡಲು ನಿಷ್ಕಾಳಜಿ ತೋರದಿರಿ: ನಲಿನ್ ಅತುಲ್





**ಕೊಪ್ಪಳ :** ಮತದಾನ ಮಾಡುವುದು ಪ್ರತಿಯೊಬ್ಬ ಪ್ರಜ್ಞೆಯ ಹಕ್ಕು ಮತ್ತು ಕರ್ತವ್ಯವಾಗಿದ್ದು, ಅರ್ಹ ಮತದಾರರು ಮತದಾನ ಮಾಡಲು ನಿಷ್ಕಾಳಜಿ ತೋರದಿರಿ, ಅರ್ಹ ಪ್ರತಿಯೊಬ್ಬ ಮತದಾರರು ಮತದಾನ ಮಾಡಿ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಕೊಪ್ಪಳ ಜಿಲ್ಲಾ ಸ್ವೀಪ್ ಸಮಿತಿಯಿಂದ ಕೊಪ್ಪಳ ನಗರದಲ್ಲಿ ಮಂಗಳವಾರ ಸಂಜೆ (ಏ.16) ಹಮ್ಮಿಕೊಳ್ಳಲಾಗಿದ್ದ ಕ್ಯಾಂಡಲ್ ಲೈಟ್ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಪ್ರಸ್ತುತ ಸುಮಾರು 18 ಲಕ್ಷ ಮತದಾರರಿದ್ದಾರೆ. ಕಳೆದ ಬಾರಿ ಸುಮಾರು ಶೇ.70 ರಷ್ಟು ಮತದಾನವಾಗಿತ್ತು. ಈ ಬಾರಿಯ ಮತದಾನ ಪ್ರಮಾಣ ಹೆಚ್ಚು ಆಗಬೇಕೆಂಬ ಗುರಿ ಇಟ್ಟುಕೊಂಡು ಜಿಲ್ಲಾ ಸ್ವೀಪ್ ಸಮಿತಿಯಿಂದ ಜಾಗೃತಿ ಮೂಡಿಸಲಾಗುತ್ತಿದೆ. ನಮ್ಮ ಮತ ನಮ್ಮ ಹಕ್ಕು ಆಗಿದ್ದು ಅದನ್ನು ಕಡ್ಡಾಯವಾಗಿ ಚಲಾಯಿಸಬೇಕು. ಮತದಾನ ಪ್ರಕ್ರಿಯೆಯಿಂದ ಯಾರೂ ಸಹ ದೂರ ಉಳಿಯಬಾರದು. ಜಿಲ್ಲೆಯ ಮತದಾನ ಪ್ರಮಾಣ ಹೆಚ್ಚಳಕ್ಕೆ ಎಲ್ಲರೂ ಶ್ರಮಿಸಬೇಕು ಎಂದರು.

ಪ್ರತಿಜ್ಞಾ ವಿಧಿ ಸ್ವೀಕಾರ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ರಾಹುಲ್ ರತ್ನಂ ಪಾಂಡೆಯ ಅವರು ಮತದಾನ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲರೂ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

**ಗಮನ ಸೆಳೆದ ಕ್ಯಾಂಡಲ್ ಲೈಟ್ ಮೆರವಣಿಗೆ:**
ಕೊಪ್ಪಳ ನಗರದ ಗಂಜ್ ವೃತ್ತದಿಂದ ಅಶೋಕ ವೃತ್ತದವರೆಗೆ ಹಾಗೂ ಗಡಿಯಾರ ಕಂಬ ವೃತ್ತದಿಂದ ಅಶೋಕ ವೃತ್ತದವರೆಗೆ ಸೇರಿ ಎರಡು ತಂಡಗಳಿಂದ ಹಮ್ಮಿಕೊಳ್ಳಲಾಗಿದ್ದ ಕ್ಯಾಂಡಲ್ ಲೈಟ್ ಮೆರವಣಿಗೆಯು ಸಾರ್ವಜನಿಕರ ಗಮನ ಸೆಳೆಯಿತು. ಈ ಜಾಥಾದಲ್ಲಿ ಅಧಿಕಾರಿಗಳು, ಸಿಬ್ಬಂದಿ, ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡು ಮತದಾನ ಜಾಗೃತಿಗೆ ಕೈಜೋಡಿಸಿದರು.

ಮತದಾನ ಜಾಗೃತಿಗೆ ಜಿಲ್ಲಾ ಸ್ವೀಪ್ ಸಮಿತಿಯ ಈ ವಿಶೇಷ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಾದ ಮಲ್ಲಪ್ಪ ತೊದಲಬಾಗಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಕೊಪ್ಪಳ ತಹಶೀಲ್ದಾರ್ ವಿಠ್ಠಲ ಚೌಗಲಾ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ಸ್ವೀಪ್ ಐಕಾನ್ಸ್ ಡಾ.ಶಿವಕುಮಾರ್ ಮಾಲಿಪಾಟೀಲ್, ಪೂರ್ಣಿಮಾ, ರಮ್ಯಾ ಹಾಗೂ ಮಹೆಬೂಬ್ ಕಿಲ್ಲೆದಾರ್ ಸೇರಿದಂತೆ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಶಿಕ್ಷಕರರು, ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಎಂಡಿಆರ್‌ಎಸ್ ವಸತಿ ಶಾಲೆ ಪ್ರವೇಶ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಕೊಪ್ಪಳ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಣೆಯಾಗುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ಶಾಲೆಗಳಲ್ಲಿ 2024–25 ನೇ ಸಾಲಿಗೆ 6 ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ


ಪೋಷಕರು/ವಿದ್ಯಾರ್ಥಿಗಳುಹತ್ತಿರದವಸತಿ ಶಾಲೆ/ಮಾಹಿತಿ ಕೇಂದ್ರ ಕಛೇರಿಗಳಲ್ಲಿ ಎಲ್ಲಾ ದಾಖಲೆಗಳೊಂದಿಗೆ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಸೇವಾಸಿಂಧು ಪೋರ್ಟಲ್ https://sevasindhuservices.karnataka.gov.in ಅಥವಾ dom.karnataka.gov.in/koppal/public ನಲ್ಲಿ ನೇರವಾಗಿ ಅರ್ಜಿಗಳನ್ನು ಸಲ್ಲಿಸಲು ಏಪ್ರಿಲ್ 30 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕುಕನೂರು: 9844040035, ತಳಕಲ್: 6361118478, ಕುದರಿಮೋತಿ: 9740702035, ಟಣಕನಕಲ್: 9902690349, ಹಿರೇಬೆಣಕಲ್–1: 9483395708, ಹಿರೇಬೆಣಕಲ್–2: 8150924173, ಹಿರೇಬನ್ನಿಗೋಳ: 9591439223, ಅಲ್ಪಸಂಖ್ಯಾತರ ನವೋದಯ ಮಾದರಿಯ ವಸತಿ ಶಾಲೆ ಹಿರೇಸಿಂದೋಗಿ : 8747092789, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಯಲಬುರ್ಗಾ\ಕುಷ್ಟಗಿ\ಗಂಗಾವತಿ, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಕೊಪ್ಪಳ ಇಲ್ಲಿಗೆ ಭೇಟಿ ನೀಡಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 5 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.05, ಮಾಜಿ ಸೈನಿಕರಿಗೆ ಶೇ. 04 ಮೀಸಲಾತಿ ಕಾಯ್ದಿರಿಸಲಾಗಿದೆ. ವಿಶೇಷದುರ್ಬಲವರ್ಗಕ್ಕೆಶೇ.05,ಸಫಾಯಿ ಕರ್ಮಚಾರಿ ವಿದ್ಯಾರ್ಥಿಗಳಿಗೆ ಶೇ. 05 ಮೀಸಲಾತಿ ಕಾಯ್ದಿರಿಸಲಾಗಿದೆ.

ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ್ ಹಾಗೂ ವಿದ್ಯಾರ್ಥಿಯ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಿಗದಿಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಅಪೂರ್ಣವಾದ ಮತ್ತು ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ 08539–225070, 8088892549, ಗಂಗಾ ವತಿ–9972524670, ಕುಷ್ಟಗಿ–8861610578, ಯಲಬುರ್ಗಾ–9620522537 ವಿಳಾಸಗಳಿಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಹ್ಲಾದಾಚಾರ್ಯ ಗದ್ದನಕೇರಿ ನಿಧನ



**ಬಾಗಲಕೋಟೆ :** ಸುಕ್ಷೇತ್ರ ಯಲಗೂರದ ಅರ್ಚಕ ಮನೆತನದ ಪ್ರಹ್ಲಾದಾಚಾರ್ಯ ಗದ್ದನಕೇರಿ(84) ಅವರು ಗುರುವಾರ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಗೋಪಾಲ ಗದ್ದನಕೇರಿ ಸೇರಿ ಮೂವರು ಪುತ್ರರು, ಓರ್ವ ಪುತ್ರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಸಿದ್ಧಾರೂಢರ ಜಯಂತಿ ಕಾರ್ಯಕ್ರಮ

# ಸಿದ್ಧಾರೂಢರು ಜಾತಿ-ಮತ-ಪಂಥ ಮೀರಿನಿಂತ ಜಗದ್ಗುರು: ಸಹಜಾನಂದ ಮಹಾಸ್ವಾಮಿಜಿ





**ಮಹಾಲಿಂಗಪುರ :** ರಾಮನವಮಿಯಂದು ಜನ್ಮತಾಳಿದ ಸಿದ್ಧಾರೂಢರು ಜಾತಿ-ಮತ-ಪಂಥಗಳನ್ನು ಮೀರಿನಿಂತ ನಿಜವಾದ ಜಗದ್ಗುರುಗಳು ಎಂದು ಸಹಜಾನಂದಸ್ವಾಮಿಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ನಗರದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಜರುಗಿದ ಜಗದ್ಗುರು ಸಿದ್ಧಾರೂಢರ 188ನೇ ಜಯಂತಿಯ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಗೀತೆಯಲ್ಲಿ ಪರಮಾತ್ಮ ಹೇಳಿದಂತೆ ಭೂಮಿ ಮೇಲೆ ಅಧರ್ಮ ಹೆಚ್ಚಾದಾಗ ಭಗವಂತ ಸಾಧು-ಸಂತರ ಮಹಾನ್ ಪುರುಷರ ರೂಪದಲ್ಲಿ ಜನ್ಮತಾಳಿ ಮನುಕುಲವನ್ನುಉದ್ಧರಿಸುತ್ತಾನೆ. ಅಂತೆಯೆ ಮನುಕುಲದ ಉದ್ಧಾರಕ್ಕಾಗಿ ಜನ್ಮ ತಾಳಿದ ರಾಮಚಂದ್ರರಂತೆ, ಹುಬ್ಬಳ್ಳಿಯ ಸಿದ್ಧಾರೂಢರು, ಶಿರಡಿ ಸಾಯಿಬಾಬಾರು ಜನ್ಮ ತಾಳಿರುವ ರಾಮನವಮಿ ದಿನವು ತ್ರಿವಳಿ ಸಂಗಮದ ಪುಣ್ಯ ದಿನವಾಗಿದೆ.

ಮಹಾತ್ಮರ ತತ್ವ, ಚಿಂತನೆ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ ದಿನಾಚರಣೆಗಳು ಸಾರ್ಥಕ ಪಡೆಯುತ್ತವೆ. ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮವು ರಕ್ಷಿಸುತ್ತದೆ, ಮಾನವ ಜನ್ಮವನ್ನು ವ್ಯರ್ಥ ಕಾಲ ಹರಣದಲ್ಲಿ ಕಳೆಯದೇ, ನಿತ್ಯ ಜಪ,ತಪ, ದಾನ, ಧರ್ಮ,ದಾಸೋಹ, ಅಧ್ಯಾತ್ಮ ಚಿಂತನೆಗಳ ಮೂಲಕ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರನ್ನಬೆಳಗಲಿ ಸದಾಶಿವ ಗುರೂಜಿ, ಮಲ್ಲೇಶಪ್ಪ ಕಟಗಿ ಶರಣರು ಮಾತನಾಡಿ ಜಗದ್ಗುರು ಸಿದ್ಧಾರೂಢರು ಓಂ ನಮಃ ಶಿವಾಯ ಎಂಬ ಮಹಾಮಂತ್ರವನ್ನು ಬಹಿರಂಗವಾಗಿ ಸಾರ್ವತ್ರಿಕರಣಗೊಳಿಸಿ ಮುಮುಕ್ಷುಗಳ ಉದ್ಧಾರಕ್ಕಾಗಿ ಶ್ರಮಿಸಿದ್ದಾರೆ.ಶ್ರೀಮನ್ನಿಜಗುಣರ ಶಾಸ್ತ್ರಕ್ಕೆ ಅಗ್ರ ಪ್ರಾಶಸ್ತ್ಯ ನೀಡಿದ ಆರೂಢರು ನಾಡಿನ ಆಧ್ಯಾತ್ಮಕ್ಷೇತ್ರಕ್ಕೆ ಮಹದುಪಕಾರಗೈದು ಭಕ್ತರ ಕಾಮಧೇನು ಕಲ್ಪವೃಕ್ಷವಾಗಿ ಬೆಳಗುತ್ತಿದ್ದಾರೆ. ಮಾನವರು ಧರ್ಮ ಮಾರ್ಗದಲ್ಲಿ ನಡೆದು ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಉತ್ತರಾಧಿಕಾರಿ ಸಿದ್ಧಾನಂದ ಭಾರತಿ ಭಾರತಿಸ್ವಾಮಿಜಿ, ಚಿಕ್ಕಪಡಸಲಗಿಯ ಮಾತೋಶ್ರೀ ಅಕ್ಕಮಹಾದೇವಿತಾಯಿ, ಉಮರಾಣಿಯ ಅಕ್ಕಮಹಾದೇವಿತಾಯಿ, ಮಧುರಖಂಡಿ ಬಸಯ್ಯಸ್ವಾಮಿಜಿ ಸಿದ್ಧಾರೂಢರ ಪವಾಡ ಮತ್ತು ಚರಿತ್ರೆಗಳನ್ನು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಿಂದ ಹಮ್ಮಿಕೊಂಡಿದ್ದ ಲಿಖಿತ ಕೋಟಿಜಪಯಜ್ಞಕಾರ್ಯಕ್ರಮದಲ್ಲಿ ಅತಿಹೆಚ್ಚು ಜಪಗಳನ್ನು ಬರೆದ ಸದ್ಭಕ್ತರನ್ನು ಸನ್ಮಾನಿಸಲಾಯಿತು.

ಮುತ್ತೈದೆಯರು ತೊಟ್ಟಿಲ ತೂಗಿ ಸಿದ್ಧಾರೂಢರ ನಾಮಕರಣ ಮಹೋತ್ಸವ ನೆರವೇರಿಸಿದರು. ಇದೇ ಸಂದರ್ಭದಲ್ಲಿ ನಾಲ್ಕನೇ ವರ್ಷದ ಲಿಖಿತ ಕೋಟಿ ಜಪಯಜ್ಞದ ಓಂ ನಮ: ಶಿವಾಯ ಮಹಾಮಂತ್ರದ ಪುಸ್ತಕವನ್ನು ಸಹಜಾನಂದ ಸ್ವಾಮಿಜಿ ಬಿಡುಗಡೆಗೊಳಿಸಿದರು.

ಸಿದ್ಧಾರೂಢ ಟ್ರಸ್ಟ್ ಕಮಿಟಿಯ ಉಪಾಧ್ಯಕ್ಷ ಡಾ.ಬಿ.ಡಿ ಸೋರಗಾಂವಿ, ಕಾರ್ಯದರ್ಶಿ ಚಂದ್ರಶೇಖರ ಮೋರೆ, ಖಜಾಂಚಿ ಅಲ್ಲಪ್ಪ ಗುಂಜಿಗಾಂವಿ, ಧರ್ಮದರ್ಶಿಗಳಾದ ಲಕ್ಕಪ್ಪ ಚಮಕೇರಿ, ಚೇತನ ಹಾದಿಮನಿ ಹಾಗೂ ಸದ್ಭಕ್ತರಾದ ಮಹೇಶ ಇಟಕನ್ನವರ, ಯಲ್ಲನಗೌಡ ಪಾಟೀಲ, ಮಲ್ಲಾರಡ್ಡಿ ಯಾದವಾಡ, ಚನ್ನಪ್ಪ ಚಂಡೋಲ, ಚನಬಸು ಹುರಕಡ್ಲಿ, ಎಸ್.ಕೆ.ಗಿಂಡೆ, ಹುಮಾಯೂನ ಸುತಾರ, ಮಹೇಶ ಬಡಿಗೇರ, ಕುಮಾರ ಉಳ್ಳಾಗಡ್ಡಿ, ಮಹಾಲಿಂಗ ಕರೆಹೊನ್ನ, ಹನಮಂತ ಮೀರಾಪಟ್ಟಿ, ಸಿದ್ದು ದಢೂತಿ, ಸದಾಶಿವ ಇಂಗಳಗಿ, ಶಿವಾನಂದ ತೇಲಿ, ಶಿವಾನಂದ ಬಡಿಗೇರ,ಸಿದ್ರಾಮ ರೊಡ್ಡನ್ನವರ ಸೇರಿದಂತೆ ನೂರಾರು ಸದ್ಭಕ್ತರು ಭಾಗವಹಿಸಿದ್ದರು.

# ಮತದಾನದ ಜಾಗೃತಿಯಲ್ಲಿ ಯುವಕರ ಪಾತ್ರ ಬಹಳ ಮುಖ್ಯ



**ರಬಕವಿ-ಬನಹಟ್ಟಿ :** ಮತದಾನದ ಜಾಗ್ರತಿಯಲ್ಲಿ ಯುವಕರ ಪಾತ್ರ ಬಹಳ ಮುಖ್ಯವಾಗಿದೆ. ಯುವಕರು ತಾವು ಮತ ಚಲಾಯಿಸುವುದರ ಜೊತೆಗೆ ತಮ್ಮ ನೆರೆ ಹೊರೆಯವರಿಗೂ ಮತದಾನದಲ್ಲಿ ಭಾಗವಹಿಸುವಂತೆ ತಿಳಿಸಬೇಕು ಎಂದು ರಬಕವಿ-ಬನಹಟ್ಟಿ ಪೌರಾಯುಕ್ತ ಜಗದೀಶ ಈಟಿ ಹೇಳಿದರು.

ಅವರು ರಬಕವಿಯಲ್ಲಿ ಮತದಾನ ಜಾಗ್ರತಿ ಅಂಗವಾಗಿ ಹಮ್ಮಿಕೊಂಡ ರಂಗೋಲಿ ಹಾಕುವುದರ ಮೂಲಕ ಜಾಗ್ರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮತದಾನದಿಂದ ಯಾರೊಬ್ಬರೂ ವಂಚಿತರಾಗಬಾರದು ಎಂಬ ಉದ್ದೇಶದಿಂದ ಮತದಾನದ ಜಾಗ್ರತಿಯನ್ನು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಾಡಲಾಗುತ್ತಿದೆ. ಮತದಾನದ ದಿನದಂದು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಯೋಗ್ಯವಾದ ಅಭ್ಯರ್ಥಿಗೆ ಮತ ನೀಡುವುದರ ಮೂಲಕ ನಾವು ನಮ್ಮ ಹಕ್ಕನ್ನು ಚಲಾಯಿಸಬೇಕು ಎಂದು ಹೇಳಿದರು. ರಬಕವಿ ಬನಹಟ್ಟಿ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತರು ಹಾಗೂ ಮೇಲ್ವಿಚಾರಕರು ರಂಗೋಲಿ ಹಾಕುವುದರ ಮುಖಾಂತರ ಮತದಾನ ಜಾಗ್ರತಿ ಮೂಡಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿ ಸಹಾಯಕ ನಿರ್ದೇಶಕ ಬಸವರಾಜ ಮುನ್ನೊಳ್ಳಿ, ಸದಾಶಿವ ಕುಂಬಾರ, ಬಸವರಾಜ ಮಠದ, ಭೀಮು ಬಾಡಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮುಧೋಳ ಬ್ಲಾಕ್ ಕಾಂಗ್ರೆಸ್ ಒಬಿಸಿ ಘಟಕದ ಅಧ್ಯಕ್ಷರಾಗಿ ಸಂಗಪ್ಪ ಅಮಾತಿ ಆಯ್ಕೆ



**ಮಹಾಲಿಂಗಪುರ :** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷರಾದ ಎಸ್. ಮಧು ಬಂಗಾರಪ್ಪನವರ ಅನುಮೋದನೆ ಮೇರೆಗೆ ಮತ್ತು ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್.ಜಿ.ನಂಜಯ್ಯಮಠ ಹಾಗೂ ಕರ್ನಾಟಕ ಸರಕಾರದ ಅಬಕಾರಿ ಮತ್ತು ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ ಅವರ ಸೂಚನೆ ಮೇರೆಗೆ ರನ್ನ ಬೆಳಗಲಿಯ ಕಾಂಗ್ರೆಸ್ ಯುವ ಮುಖಂಡರಾದ ಸಂಗಪ್ಪ ಮಹಾದೇವಪ್ಪ ಅಮಾತಿ ಅವರನ್ನು ಹಿಂದುಳಿದ ವರ್ಗಗಳ ವಿಭಾಗದ ಮುಧೋಳ ತಾಲೂಕಾ ಅಧ್ಯಕ್ಷರನ್ನಾಗಿ, ಲೋಕಾಪುರ ಬ್ಲಾಕ್ ಕಾಂಗ್ರೆಸ್ ಒಬಿಸಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಮೆಟಗುಡ್ಡದ ವೆಂಕಣ್ಣ ಹುಣಸಿಕಟ್ಟಿ ಮತ್ತು ಮುಧೋಳ ಬ್ಲಾಕ್ ಒಬಿಸಿ ಪ್ರಧಾನ ಕಾರ್ಯದರ್ಶಿಯಾಗಿಲಾಲಸಾಬ್‌ನದಾಫ್‌ರವರನ್ನು ಆಯ್ಕೆ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ, ಬಾಗಲಕೋಟೆ ಜಿಲ್ಲಾ ಒಬಿಸಿ ಘಟಕದ ಅಧ್ಯಕ್ಷರಾದ ಮುದಕಣ್ಣ ಅಂಬಿಗೇರ, ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಶೋಕ ಕಿವಡಿ, ಉದಯ ಸಾರವಾಡ, ಮುಧೋಳ ಯೂತ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಪ್ರವೀಣ ಪಾಟೀಲ, ಈರಪ್ಪಕಿತ್ತೂರ,ಯಮನಪ್ಪದೊಡ್ಡಮನಿ,ಮುಬಾರಕ್ ಅತ್ತಾರ,ಸದಾಶಿವ ಕುಲಗೋಡ,ಯಮನಪ್ಪ ಪೂಜೇರಿ ಅವರು ನೂತನ ಅಧ್ಯಕ್ಷರಿಗೆ ಸನ್ಮಾಸಿ ಅಭಿನಂದಿಸಿದ್ದಾರೆ.

# ಬನಹಟ್ಟಿ ನಗರದಲ್ಲಿ ಸಂಭ್ರಮದ ಐದೇಶಿ ಕಾರ್ಯಕ್ರಮ






**ರಬಕವಿ-ಬನಹಟ್ಟಿ :** ಬನಹಟ್ಟಿ ನಗರದ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ ವತಿಯಿಂದ ಐದೇಶಿ ಕಾರ್ಯಕ್ರಮ ಗುರುವಾರ ರಾತ್ರಿ ಸಂಭ್ರಮ ಸಡಗರದಿಂದ ಮಹಾಮಂಗಳಾರುತಿಯೊಂದಿಗೆ ನಡೆಯಿತು.

ಐದೇಶಿ ಎಂದರೆ ಐದು ದಿನಗಳ ಕಾರ್ಯಕ್ರಮ. ಐದು ದಿನಗಳ ಹಿಂದೆ ದೇವರನ್ನು ಕರೆದುಕೊಳ್ಳುವ ಕಾರ್ಯ ನಡೆದಿತ್ತು. ಐದನೆಯ ದಿನದ ಕಾರ್ಯಕ್ರಮ ನಿಮಿತ್ತವಾಗಿ ಗುರುವಾರ ರಾತ್ರಿ ಬನಹಟ್ಟಿಯ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಬೆಳಗ್ಗೆ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಮಧ್ಯಾಹ್ನ ಮಹಿಳೆಯರು ಮಲ್ಲಿಕಾರ್ಜುನ ದೇವರಿಗೆ ನೈವೇದ್ಯ ಸಲ್ಲಿಸಿದರು. ಬೆಲ್ಲ ಹಂಚುವ ಕಾರ್ಯಕ್ರಮದ ನಂತರ ಮಹಾಮಂಗಳಾರುತಿ ನಡೆಯಿತು. ಮಂಗಳಾರುತಿಯ ಸಯಮದಲ್ಲಿ ಪುರುಷರು ದಿವಟಿಗೆಗಳನ್ನು ಮತ್ತು ಮಹಿಳೆಯರು ಆರತಿಗಳನ್ನು ಹಿಡಿದುಕೊಂಡು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನಗರದಲ್ಲಿ 20 ಕ್ವಿಂಟಲ್ ಕಿಂತಲೂ ಹೆಚ್ಚು ಬೆಲ್ಲ ಹಂಚಲಾಯಿತು.

ಈ ಸಂದರ್ಭದಲ್ಲಿ ದೈವ ಮಂಡಳಿಯ ಚೇರಮನ್ ಮಲ್ಲಿಕಾರ್ಜುನ ತುಂಗಳ, ಮಹಾಶಾಂತ ಶೆಟ್ಟಿ, ಪ್ರಶಾಂತ ಕೊಳಕಿ, ಕಿರಣ ಆಳಗಿ, ಚೆನ್ನಪ್ಪ ಗುಣಕಿ, ಶಿವು ಬಾಗೇವಾಡಿ, ಶಿವಾನಂದ ಬುದ್ನಿ, ಶಿವನಿಂಗ ಶಿರಹಟ್ಟಿ, ಗುರು ಹೊರಟ್ಟಿ, ಮಲ್ಲಿಕಾರ್ಜುನ ಬುಟ್ಟನವರ, ರಾಜು ಲುಕ್ಕ, ಮಲ್ಲಿಕಾರ್ಜುನ ಬಾವಲತ್ತಿ, ರಾಚಯ್ಯ ಮಠಪತಿ, ಚನ್ನಬಸಯ್ಯ ಮಠಪತಿ, ಬಾಳು ಗಣೇಶನವರ, ಶಿವು ಗಣೇಶನವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಆಚರಣೆ



**ಧಾರವಾಡ :** ಆಜಾದ್ ಮಜದೂರ್ ಕಿಸಾನ್ ಪಕ್ಷ ಕರ್ನಾಟಕ, ವತಿಯಿಂದ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಆಚರಿಸಲಾಯಿತು. ಪಕ್ಷದ ರಾಜ್ಯಾಧ್ಯಕ್ಷ ಪ್ರಕಾಶ ಕಾಂಬಳೆ ಅವರು ಡಾ. ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜಪ್ಪ ಮಾದರ, ರಾಜು ಕಾಂಬಳೆ, ಅಶೋಕ ರಾಠೋಡ, ಶಿವರಾಜ ಕಾಂಬಳೆ, ಸಚಿನ ಪಾಟೀಲ, ಜಯಾನಂದ ನೀಲಣ್ಣನವರ ಮುಂತಾದವರು ಹಾಜರಿದ್ದರು. ನಂತರ ಸಾರ್ವಜನಿಕರಿಗೆ ಸಿಹಿ ಹಂಚಲಾಯಿತು.

# ಸಾಮಾನ್ಯ ವೀಕ್ಷಕರಾಗಿ ಸರವನವೆಲ್ರಾಜ್ ನೇಮಕ

**ಬಾಗಲಕೋಟೆ :** ಬಾಗಲಕೋಟೆ ಲೋಕಸಭಾ ಚುನಾವಣೆ-2024ರ ಸಾಮಾನ್ಯ ವೀಕ್ಷಕರನ್ನಾ ಐ.ಎ.ಎಸ್ ಅಧಿಕಾರಿ ಈ.ಸರವನವೆಲ್ರಾಜ್ ಅವರನ್ನು ಭಾರತ ಚುನಾವಣಾ ಆಯೋಗವು ನೇಮಕ ಮಾಡಿ ಆದೇಶಿಸಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ.

ಸಾಮಾನ್ಯ ವೀಕ್ಷಕರಾದ ಈ.ಸೆರವನವೆಲ್ರಾಜ್ (ದೂಸಂ. 08354-200060, ಮೊನಂ. 7899561534) ಅವರು ಈಗಾಗಲೇ ಜಿಲ್ಲೆಗೆ ಆಗಮಿಸಿದ್ದು, ವಿದ್ಯಾಗಿರಿಯ ನ್ಯೂ ಸರ್ಕ್ಯೂಟ್ ಹೌಸ್ ನೆಲ ಮಹಡಿಯಲ್ಲಿ ಸಂಜೆ 4 ರಿಂದ 5ರ ವರೆಗೆ ಲಭ್ಯವಿರುತ್ತಾರೆ.

ಸಾರ್ವಜನಿಕರು ಯಾವುದೇ ಮನವಿ, ಅಹವಾಲುಗಳಿದ್ದಲ್ಲಿ ಖುದ್ದಾಗಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

# ಚಿಮ್ಮಡದಲ್ಲಿ ಶ್ರೀ ಮಲ್ಲಿಕಾರ್ಜುನ ಐದೇಶಿ ಮಹೋತ್ಸವ



**ಚಿಮ್ಮಡ :** ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಐದೇಶಿ ಮಹೋತ್ಸವ ಗುರುವಾರ ಸಂಜೆಯಿಂದ ವಿಜ್ರಂಣೆಯಿಂದ ಜರುಗಿತು.

ವಿಶೇಷ ಪೂಜಾ ಕಾರ್ಯಕ್ರಮ ದೊಂದಿಗೆ ಆರಂಭಗೊಂಡ ಈ ಐದೇಶಿ ಉತ್ಸವದಲ್ಲಿ ಗ್ರಾಮದ ರೈತರು ತಾವು ಬೆಳೆದ ಬೆಳೆ, ಹಾಗೂ ಬೆಲ್ಲವನ್ನು ಮಲ್ಲಯ್ಯ ದೇವರಿಗೆ ನೈವೆದ್ಯೆ ಅರ್ಪಿಸಿ ಬಡವರಿಗೆ ದಾನವಾಗಿ ನೀಡುವ ಪರಂಪರೆ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದು ಮಹಿಳೆಯರು ಮಕ್ಕಳು ಸೇರಿದಂತೆ ಸಾವಿರಾರು ಜನ ರೈತರು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ತಮ್ಮ ಹರಕೆಗಳನ್ನು ತೀರಿಸಿದರು.

**ಮಳೆ ಅಡ್ಡಿ :** ರಾತ್ರಿ ನಡೆಯ ಬೇಕಾಗಿದ್ದ ಮಹಾ ಮಂಗಳದ ವೇಳೆಗೆ ಕುಂಭದ್ರೋಣ ಮಳೆ ಪ್ರಾರಂಭವಾಗಿದ್ದರಿಂದ ಮಂಗ ಳಾರತಿಗೆ ತೊಂದರೆಯಾಯಿತು.

**ನಾಟಕ ರದ್ದು :** ಶ್ರೀಶೈಲ ಮಲ್ಲಿಕಾರ್ಜುನ ಕಂಬಿ ಐದೇಶೀ ನಿಮತ್ತ ಗ್ರಾಮದ ಗರತಿ ಹೆಣ್ಣಿಗೆ ಗರ್ವದ ಗಂಡ ಎಂಬ ನಾಟಕ ಹಮ್ಮಿಕೊಂಡು ಸಂಪೂರ್ಣ ತಯಾರಿ ಮಾಡಲಾಗಿತ್ತು ನಾಟಕ ಪ್ರಾರಂಭಕ್ಕೂ ಮುನ್ನ ಜೋರು ಮಳೆ ಗಾಳಿ ಪ್ರಾರಂಭವಾದ ಹಿನ್ನೆಲೆಯಲ್ಲಿ ನಾಟಕ ರದ್ದುಗೊಳಿಸಲಾಯಿತು.

# ಸಹಕಾರದಿಂದ ಸಾಧನೆ ಸಾಧ್ಯ: ಶರತಚಂದ್ರ ಜಂಬಗಿ




**ಚಿಮ್ಮಡ :** ಪರಸ್ಪರ ಸಹಕಾರದೊಂದಿಗೆ ಪರೀಶ್ರಮ ಸೇರಿದರೆ ಸರಕಾರಿ ಸಂಸ್ಥೆಗಳಲ್ಲಿಯೂ ಉತ್ತಮ ಸಾಧನೆ ಮಾಡಬಹುದೆಂದು ಚಿಮ್ಮಡ ಗ್ರಾಮದ ಸರಕಾರಿ ಪದವಿ ಪೂರ್ವ ವಿದ್ಯಾಲಯದ ಪ್ರಾಚಾರ್ಯ ಶರತ್ಚಂದ್ರ ಜಂಬಗಿ ಹೇಳಿದರು.

ಗ್ರಾಮದ ಸರಕಾರಿ ಪದವಿ ಪೂರ್ವ ವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರ್‍ಯಾಂಕ್ ವಿದಾರ್ಥಿಗಳ ಸತ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರೊಂದಿಗೆ ಅಭೀವೃದ್ದಿ ಸಮೀತಿಯ ಸಹಕಾರದಿಂದ ನಮ್ಮ ವಿದ್ಯಾಲಯವು ಶೇ. ನೂರರಷ್ಟು ಫಲಿತಾಂಶ ಪಡೆಯಲು ಸಾಧ್ಯವಾಗಿದ್ದು ಇದೇ ಸಹಕಾರ ಮುಂದುವರೆದಲ್ಲಿ ಇದಕ್ಕಿಂತ ಉತ್ತಮ ಫಲಿತಾಂಶ ದೊರೆಯಲಿದೆ ಎಂದರು.

ಕಾಲೇಜು ಅಭಿವೃದ್ದಿ ಸಮೀತಿಯ ಅಧ್ಯಕ್ಷ ಬಸವರಾಜ ಕುಂಚನೂರ ಮಾತನಾಡಿ ಕಾಲೇಜು ಪ್ರಾರಂಭವಾಗಿ ಕೇವಲ ಮೂರು ವರ್ಷಗಲಾದರೂ ಖಾಸಗೀ ಶಾಲೆಗಳೂ ನೀಡದಷ್ಟು ಉತ್ತಮ ಫಲಿತಾಂಶ ನೀಡಲು ಕಾರಣೀಭೂತರಾದ ಎಲ್ಲರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪರಪ್ಪಾ ಪಾಲಭಾವಿ, ಪ್ರಭು ನೇಸೂರ, ಪ್ರವೀಣ ಮೈತ್ರಿ ಮಾತನಾಡಿದರು. ಅಭಿವೃದ್ದಿ ಸಮೀತಿಯ ಬೀರಪ್ಪಾ ಹಳೆಮನಿ, ರಾಚಯ್ಯ ಮಠಪತಿ, ಶಂಕರಗೌಡ ಪಾಟೀಲ, ಅವ್ವನಪ್ಪಾ ಮುಗಳಖೋಡ, ಉಪನ್ಯಾಸಕರಾದ ಬಿ.ಬಿ. ಕುದರಿಮನಿ, ಎಚ್.ಎಂ. ಕುಂಬಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದೇ ಸಂಧರ್ಬದಲ್ಲಿ ವಾಣಿಜ್ಯ ವಿಭಾಗದಲ್ಲಿ ಸಾಧನೆ ಮಾಡಿದ ಕುಮಾರಿ ಲಕ್ಷ್ಮಿ ರಮೇಶ ಗೋವಿಂದಗೋಳ, ಕುಮಾರಿ ಅಂಬಿಕಾ ಸಂಗಪ್ಪಾ ಧಡೂತಿ, ಕುಮಾರಿ ಪವಿತ್ರಾ ಮಹಾಲಿಂಗಪ್ಪಾ ಪಾಟೀಲ ಹಾಗೂ ಕಲಾ ವಿಭಾಗದಲ್ಲಿ ಕುಮಾರಿ ಬೋರಮ್ಮ ಅರ್ಜುನ ವೆಂಕತ್ಯಾಪೂರ, ಕುಮಾರಿ ರೂಪಾ ಕೆಂಚಪ್ಪಾ ನಡುವಿನಮನಿ, ಕುಮಾರಿ ಜ್ಯೋತಿ ಶ್ರೀಶೈಲ ಪಟ್ಟಣಶೆಟ್ಟಿಯವರನ್ನು ಕಾಲೇಜು ಅಭಿವೃದ್ದಿ ಸಮೀತಿಯಿಂದ ಸತ್ಕರಿಸುವ ಮೂಲಕ ಗೌರವಿಸಲಾಯತು.

# ಧಾರವಾಡ: ಮಹಿಳಾ ಸಾಹಿತ್ಯ ಸಮಾವೇಶ




**ಧಾರವಾಡ :** ಸೃಜನಶೀಲ ಸಾಹಿತ್ಯ ಭಾವನೆಗಳ ಅಭಿವ್ಯಕ್ತಿಗೆ ಸಾಧನವಾಗಿದೆ. ಜಾನಪದ ಗರತಿಯರಲ್ಲಿ ಆಗಾಧವಾದ ಸೃಜನಶೀಲತೆ ಇತ್ತು ಎಂದು ಬೆಳಗಾವಿಯ ವಿಮರ್ಶಕಿ ಹಾಗೂ ಚಿಂತಕರಾದ ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಸುವರ್ಣ ಕರ್ನಾಟಕ ಸಂಭ್ರಮದ ನಿಮಿತ್ತ ಆಯೋಜಿಸಿದ್ದ ಮಹಿಳಾ ಸಾಹಿತ್ಯ ಸಮಾವೇಶ ಕಾರ್ಯಕ್ರಮದಲ್ಲಿಸೃಜನ ಹಾಗೂ ಸೃಜನೇತರ ಸಾಹಿತ್ಯ' ಕುರಿತ ಸಾಹಿತ್ಯ ಗೋಷ್ಠಿಯಲ್ಲಿ ಮಾತನಾಡಿದರು.

ಸೃಜನಶೀಲ ಸಾಹಿತ್ಯ ಬುದ್ಧಿ-ಭಾವದ ಪ್ರಧಾನವಾದರೆ ಸೃಜನೇತರ ಸಾಹಿತ್ಯವೆಲ್ಲ ಜ್ಞಾನದ ಪ್ರಧಾನವಾಗಿವೆ. ಕಥೆ, ಕಾದಂಬರಿ, ನಾಟಕ, ಕಾವ್ಯಗಳು ಸೃಜನಶೀಲವಾದರೆ, ತರ್ಕಶಾಸ್ತ್ರ ವಿಮರ್ಶೆ, ವಿಜ್ಞಾನ-ತಂತ್ರಜ್ಞಾನ ಸಂಶೋಧನಾ ಶಾಸ್ತ್ರ, ಮಾನಸಿಕ ಶಾಸ್ತ್ರ ಹಾಗೂ ಶಾಸನ ಸಂಶೋಧನೆಗಳು ಸೃಜನೇತರ ಸಾಹಿತ್ಯವಾಗಿವೆ. ಉತ್ತರಕರ್ನಾಟಕದಲ್ಲಿ ಸೃಜನೇತರ ಸಾಹಿತ್ಯಕ್ಕೆಡಾ. ಹನುಮಾಕ್ಷಿ ಗೋಗಿ ಹಾಗೂ ರಾಯಚೂರಿನಕವಿತಾ ಮಿಶ್ರಾರ ಕೊಡುಗೆ ಅನನ್ಯದಾದದ್ದು. ಸೃಜನೇತರ ಸಾಹಿತ್ಯಕ್ಕೂ ವಿಫುಲ ಅವಕಾಶ ಲಭ್ಯವಾಗಬೇಕೆಂದು ಹೇಳಿದರು.

ವಿದ್ಯಾರಣ್ಯ ಪ.ಪೂ. ಮಹಾವಿದ್ಯಾಲಯದ ಪ್ರಾಚಾರ್ಯೆಡಾ.ಶರಣಮ್ಮ ಗೋರೇಬಾಳ ಮಹಿಳೆ ಮತ್ತು ಸಾಹಿತ್ಯಕುರಿತು ಮಾತನಾಡಿ, ಮಹಿಳೆ ಎಂದರೇನೇ ಸಾಹಿತ್ಯ.ತ್ಯಾಗ, ಕರುಣೆ, ಪ್ರೀತಿ, ವಾತ್ಸಲ್ಯದ ಮಹಿಳೆ ತನ್ನ ಭಾವನೆಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುತ್ತಿದ್ದಳು. 12 ನೇ ಶತಮಾನದಲ್ಲಿ 33 ಜನ ಮಹಿಳಾ ವಚನಗಾರ್ತಿಯರುಜೀವನಮುಖಿ ಕಾಳ-ಜಿಯೊಂದಿಗೆ ವಚನ ಸಾಹಿತ್ಯರಚಿಸುತ್ತಿದ್ದರು. ಇಂದು ಮಹಿಳೆಯರಿಗೆ ವಿಫುಲ ಅವಕಾಶಗಳಿದ್ದು ಸಾಹಿತ್ಯರಚನೆಯಲ್ಲಿ ಮುಂದಾಗಬೇಕು.ಮಹಿಳೆಯರನ್ನು ಎರಡನೇದರ್ಜೆ ಪೌರರಂತೆಕಾಣುವದು ಸರಿಯಲ್ಲಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಶಾಸನ ಶಾಸ್ತ್ರ ಸಂಶೋಧಕಿ ಹನುಮಾಕ್ಷಿ ಗೋಗಿ ಮಾತನಾಡಿ, ಸೃಜನ, ಸೃಜನೇತರ ಸಾಹಿತ್ಯದ ವ್ಯಾಪ್ತಿ ವಿಸ್ತಾರವಾಗಿದೆ.ಇದಕ್ಕೆ ಸಮಯದ ಮಿತಿಇರಲಾರದು.ಇಂದು ಮಹಿಳಾ ಸಾಹಿತ್ಯಜಾತಿಗುಂಪುಗಾರಿಕೆ ಮೀರಿ ಬೆಳೆಯುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ವಿಶ್ವೇಶ್ವರಿ ಹಿರೇಮಠಇದ್ದರು, ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರ, ಡಾ.ಮಹೇಶ ಹೊರಕೇರಿ ನಿರೂಪಿಸಿದರು.ವೀರಣ್ಣಒ-ಡ್ಡೀನ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೊ.ಮಾಲತಿ ಪಟ್ಟಣಶೆಟ್ಟಿ, ಡಾ.ಮಲ್ಲಿಕಾಘಂಟಿ, ಪ್ರೊ. ಶಾಂತಾಇಮ್ರಾಪೂರ, ರಾಧಾ ಶ್ಯಾಮರಾವ, ಪ್ರಭಾ ನೀರಲಗಿ, ವಿಜಯಲಕ್ಷಿಕಲ್ಯಾಣಶೆಟ್ಟರ ಹಾಗೂ ಶಿವಾನಂದ ಭಾವಿಕಟ್ಟಿ, ವಿವಿಧಕಾಲೇಜಿನ ಸುಮಾರು 50 ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಸೇರಿದಂತೆಅನೇಕರು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State